UNIVERSAL
LIBRARY
OU_200573
UNIVERSAL
LIBRARY

THE

# KARNATAKA GRANTHAMALA

Series No. 70.

# ಕನ್ನಡ ನಾಣ್ಣುಡಿ

ಆರ್. ತಾತಾ. ಎಂ. ಎ., ಎಲ್. ಟಿ.

MYSORE
THE G. T. A. PRESS.

1915

# ಮುನ್ನುಡಿ.

ಇದಕ್ಕೆ ಮೂಲಗ್ರಂಥವು ತಮಿಳಿನಲ್ಲಿದೆ. ' ನಾಲುಂ ರೆಂಡುಂ ಶೊಲ್ಲುಕ್ಕುರುದಿ ' ಎಂಬಂತೆ ನಾಲಡಿಯೂ ಕುರಳೂ ತಮಿಳಿನಲ್ಲಿ ಅತಿ ಪ್ರಸಿದ್ಧವಾದ ನೀತಿಮಂಜರಿಗಳು. ತಮಿಳ ನಾಲಡಿಯ ವೃತ್ತಾಂತವನ್ನು ಒಬ್ಬರು ಹೀಗೆಂದು ಬರೆದಿರುವರು :—

ಸುಮಾರು ಎರಡುಸಾವಿರ ವರುಷಗಳ ಹಿಂದೆ ಪಾಂಡ್ಯದೇಶದ ಮಧುರೆಯೆಂಬ ನಗರಿಯಲ್ಲಿ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದ ಉಗ್ರಪ್ಪೆರುವಳುದಿ ಎಂಬರಸನಿಂದ ಆದರಿಸಲ್ಪಟ್ಟ ವಿದ್ವದ್ಗೋಷ್ಠಿಗಳಲ್ಲಿ ಬಂದು ಪಂಗಡದವರಾದ ಶ್ರಮಣ ಮುನಿಗಳಿಂದ ' ನಾಲಡಿಯಾರ್ ' ಎಂಬುದು ರಚಿಸಲ್ಪಟ್ಟಿತು. ಪದಿನೆಣ್ಕೀಳ್ಕಣಕ್ಕೆಂಬ ಗ್ರಂಥಗುಚ್ಛಗಳಲ್ಲಿ ನಾಲಡಿಯಾರೆಂಬುದು ಮೊದಲನೆಯದು.

ಹಿಂದೊಮ್ಮೆ ಸಮಣರೆಣ್ಣಾಯಿರವರು ಆ ಕಾಲದಲ್ಲಿ ಬಂದ ಬರಕ್ಕೆ ತಡೆಯಲಾರದೆ ತಮ್ಮ ದೇಶವನ್ನು ಬಿಟ್ಟು ಪಾಂಡ್ಯದೇಶಕ್ಕೆ ಬಂದು ಆ ದೇಶದ ಅರಸನಾದ ಉಗ್ರಪ್ಪೆರುವಳುದಿಯಿಂದ ಏನೊಂದೂ ಕೊರತೆಯಿಲ್ಲದಂತೆ ಆದರಿಸಲ್ಪಡುತ್ತಿದ್ದರು. ಹೀಗೆ ಆದರಿಸಲ್ಪಡುತ್ತಿದ್ದ ಆ ಮುನಿಗಳು ತಮ್ಮ ದೇಶವು ಬರವು ಹಿಂಗಿ ಸುಭಿಕ್ಷವಾಗಿರುವುದನ್ನರಿತು ತಂತಮ್ಮ ಊರುಗಳಿಗೆ ಹೋಗಲಿಕ್ಕೆ ಪಾಂಡ್ಯರಾಜನ ಅಪ್ಪಣೆಯನ್ನು ಕೇಳಿದರು. ಶಾಸ್ತ್ರ ಶ್ರುತಿ ಜ್ಞಾನ ಆಚರಣೆಗಳಲ್ಲಿ ಶ್ರೇಷ್ಠರಾದ ಆ ಮುನಿಗಳನ್ನು ಅರಸನು ಬಿಟ್ಟಿರಲು ಮನವಿಲ್ಲದವನಾಗಿ ಅವರಿಗೆ ಹೋಗಲಿಕ್ಕೆ ಅಪ್ಪಣೆಯನ್ನು ಕೊಡದೆಯೇ ಇದ್ದನು. ಇದನ್ನರಿತ ಸಮಣರು ಒಬ್ಬೊಬ್ಬರೂ ಒಂದೊಂದು ಪದ್ಯವನ್ನು ಬರೆದು ತಾವು ಬೀಡಿದ್ದ ಆಸನದ ಕೆಳಗೆ ಮಡಗಿ ಆರೂ ಅರಿ

ಯದಂತೆ ರಾತ್ರಿಯಲ್ಲಿ ಒಬ್ಬೊಬ್ಬರಾಗಿ ಹೊರಟು ಹೋದರು. ಉದಯವಾದ ಬಳಿಕ ಅರಸನು ಆ ಮುನಿಗಳನ್ನು ಕಾಣದೆ ವ್ಯಾಕುಲಿತನಾಗಿ ಅವರ ಬೀಡಾರಗಳಲ್ಲಿ ಹುಡುಕಿ ಕಾಣದೆ ಅವರ ಪೀಠಗಳ ಕೆಳಗೆ ಒಂದೊಂದು ಪದ್ಯವನ್ನು ಬರೆದಿದ್ದ ಚೀಟಿಗಳಿದ್ದುದನ್ನು ಕಂಡನು. ಅವನ್ನು ತೆಗೆದು ಒಟ್ಟಿಗೆ ಸೇರಿಸಿ ವಿಚಾರಿಸುವಲ್ಲಿ ಒಂದಕ್ಕೊಂದು ಹೊಂದಿಕೆಯಿಲ್ಲದಿರುವುದನ್ನು ಕಂಡು ಓಲೆಗಳನ್ನು ವೈಗೈ ಎಂಬ ನದಿಯಲ್ಲಿ ಹಾಕಿಬಿಡುವಂತೆ ಹೇಳಿದನು. ಬಿಸುಟು ಹಾಕಿದ ಆ ಚೀಟುಗಳೊಳಗೆ ನಾನೂರು ಇದಿರೇರಿ ದಡವನ್ನು ಸೇರಿದುವು. ಅದನ್ನು ಕಂಡು ಅರಸನು ಅವನ್ನು ಒಂದು ಗ್ರಂಥವಾಗಿಸಿ 'ನಾಲಡಿಯಾರ್' ಎಂದು ಹೆಸರಿಟ್ಟನು. ಇದಿರೇರಲಾರದೆ ಹೇಗೂ ಕರೆಸೇರಿದುವನ್ನು 'ಪಳಮೊಳಿ' ಎಂದೂ 'ಅರನೆರಿಚ್ಚಾರಂ' ಎಂದೂ ಹೆಸರಿಟ್ಟು ಉದ್ಧರಿಸಿದನಂತೆ.

ಇಂತು ಪ್ರಸಿದ್ಧವಾದ ತಮಿಳ ನಾಲಡಿಯನ್ನು ಐದಾರು ವರುಷಗಳಿಗೆ ಹಿಂದೆ ಭಾಷಾಸೇವೆಗೆಂದು ಓದುತ್ತಿರುವಲ್ಲಿ ಪದ್ಯಗಳು ನೀತಿಯುಕ್ತವಾಗಿಯೂ ನಮ್ಮ ಕನ್ನಡ ಜೈನಕವಿಗಳ ಮಾರ್ಗದಂತೆಯೂ ಇದ್ದುದರಿಂದ ಇವನ್ನು ಕನ್ನಡಿಸಿದರೆ ಚನ್ನಾಗಿರಬಹುದೆಂದು ತೋರಿತು. ಆದರೆ ಈ ಕಾರ್ಯಕ್ಕೆ ಬೇಕಾದ ಉಭಯಭಾಷಾಪಾಂಡಿತ್ಯವೂ ಕವಿತಾಶಕ್ತಿಯೂ ಸಾಲದೆ, ಪದ್ಯಗಳನ್ನು ಬರೆವ ಕ್ರಮವನ್ನೂ ಅರಿತುಕೊಳ್ಳದೆ ಜೆಳ್ಳಕ್ಕರಿಗನಂತೆ ಹೊಸೆದು ದಡಂಪ್ರವೇಶ ಮಾಡಿದುದಾಯ್ತು. 'ಕೆಲವು ಪದ್ಯಗಳಲ್ಲಿ ಪೂರ್ವಾಪರಸಂಬಂಧವಿಲ್ಲ. ಅನ್ವಯವು ಕ್ಲಿಷ್ಟ; ವ್ಯರ್ಥಪದಗಳು ಹೆಚ್ಚು; ವ್ಯಾಕೃತಿಯ ಮರ್ಯಾದೆಯೂ ಮೀರಿರುವುದು' ಹೀಗೆಂದು ಹಲವು ದೋಷಗಳನ್ನು ತೋರಿಸಿ, ಜಾಡ್ಯವನ್ನು ಹೊಂದಿದ ಕೃತಿಗೆ ಗುಣವಾಗುವಂತೆ ಹಿತಸೂಚನೆಗಳನ್ನು ಹೇಳಿ ನೆಟ್ಟಗೆ ಬರೆವಂತೆ ಹೇಳಿದ ಶ್ರೀವರ್ಮ ವರದಾಚಾರ್ಯರ (ಮಹಾರಾಜರ ಕಾಲೇಜಿನ ಕನ್ನಡ ಮತ್ತು ಸಂಸ್ಕೃತ ಪಂಡಿತರು)

ಮಾತುಗಳನ್ನು ಒಂದು ಕಿವಿಯಿಂದ ಕೇಳಿದೆನು. ಮತ್ತೊಮ್ಮೆ ಮತ್ತೊಂದು ಕಿವಿಯಿಂದ ತಮಿಳ ಕಾವ್ಯದ ಆಧಾರದಿಂದ ಬರೆದ ನೀತಿಮಂಜರಿಯೆಂಬ ಕಾವ್ಯದ ಒಂದೆರಡು ಪದ್ಯಗಳನ್ನೂ ಕೇಳಿದೆನು. ಇವೆರಡನ್ನೂ ಬಲ್ಲವನಿಗೆ ಅನುಕೂಲತೆಯೂ ಅವಕಾಶವೂ ಇದ್ದಲ್ಲಿ, ಸೊಗಸಾದ ಕಾವ್ಯವನ್ನು ಬರೆಯಲಿಕ್ಕೆ ಮಾರ್ಗವನ್ನು ಬೇರೆ ಕಲಿಯಬೇಕಾಗಿಲ್ಲ, ಆದರೆ ದೋಷಗಳೆಲ್ಲವನ್ನೂ ಒಳಕೊಳ್ಳುವಂತೆ ಬರೆಯಲಿಕ್ಕಾಗದೆ ಹೋಯ್ತೆಂದು ನನಗೆ ಪಶ್ಚಾತ್ತಾಪವಾಗಿರುವುದು. ಬರೆದಿಟ್ಟು ಐದಾರು ವರ್ಷಗಳಾಗಿ ಹೋದುವು. ಪ್ರಸರವಲೋಕನದಿಂದ ಗುಣವಾದೀತೆಂದಿದ್ದರೂ ವೈದ್ಯರ ಸಹಾಯವಿಲ್ಲದುದರಿಂದ ಜಾಡ್ಯವು ಹೋಗಲಿಲ್ಲ. ಆದುದರಿಂದ ಪಾಠಕ ಮಹಾಶಯರು ಕೃಪೆಮಾಡಿ ಶುದ್ಧಪತ್ರವನ್ನು ನೋಡಿ ಮುಂದಾಗಿ ಸರಿಮಾಡಿಕೊಂಡು ಆಮೇಲೆ ಗುಣವನ್ನು ಹುಡುಕಲಿಕ್ಕೆ ಪಂಜುಹಿಡಿದು ನೋಡಬಹುದು. ದೋಷಗಳನ್ನು ಹುಡುಕಲೇ ಬೇಡ. ಒಂದಕ್ಷರಕ್ಕೆ ಎರಡು ಮೂರಲಿಕ್ಕೂ ಸಾಕು.

10, 71, 73, 76, 77, 79, 97, 105, 107, 117, 128. 138, 146, 223, 224, 226, 231, 234, 237, 242, 245, 285, 290, 307, 348—ಈ ಮುಂತಾದ ಪದ್ಯಗಳಲ್ಲಿ ಮಲಯರಸನಿಗೆ ಸಂಬೋಧನೆ ಇರುವುದರಿಂದ ಅನ್ವಯವು ಕಟ್ಟಿರಲಿಕ್ಕೆ ಸಾಕು ; 287 ರಲ್ಲಿ ಆರೋ ಸ್ತ್ರೀಯನ್ನು ಸಂಬೋಧನೆ ಮಾಡಿ ಹೇಳಿದೆ.

ಮತ್ತೊಂದು ಮಾತು. ಇಂತಹ ಪ್ರಯತ್ನಕ್ಕೆ ಸಹಾಯವನ್ನು ಮಾಡಿ ಗ್ರಂಥಮಾಲೆಯಲ್ಲಿ ಮುದ್ರಿಸಲು ಅವಕಾಶವನ್ನು ಕೊಡಿಸಿದ ಶ್ರೀಮಂತರಾದ ಬಾಪೂ ಸುಬ್ಬರಾಯರಿಗೆ ನನ್ನ ಧನ್ಯವಾದಗಳು.

ವಿದ್ವಜ್ಜನರೂ ದ್ರಾವಿಡಭಾಷಾಪಕ್ಷದವರೂ ಕೃಪೆಮಾಡಿ ಮತ್ತೊಮ್ಮೆ ಮುದ್ರಿಸುವುದರೊಳಗೆ, ಹಿತಸೂಚನೆಗಳನ್ನು ತಿಳಿಸಿದರೆ ಕೃತಕೃತ್ಯನಾಗುವೆನು.

R. Tata.

ಶ್ರೀ

# ಕನ್ನಡ ನಾಲಡಿ.

(ಪೀಠಿಕೆ)

ಧರೆಯುಂ ಷಟ್ಖಂಡಮುಂ ದಾನವ ಭಯರಹಿತಂಗೆಯ್ದು ಸತ್ಕೀರ್ತಿಯುಂದಿ ।
ಕ್ಕರಿದಂತಸ್ತೋಮದೊಳ್ಮೆತ್ತಿಸಿ ನಿಖಿಳಜಗಂ ಹರ್ಷವಾರಾಶಿಯೊಳ್ಮೀಂ ॥
ಕಿರೆ ದೇವಾನೀಕ ನಾನಾನಕರುತಿ ಗಗನಾಭೋಗಮಂ ತೀವಿ ತಳ್ಪ ।
ರ್ಪಿರಲಿರ್ದ್ದ ಸುಂದರಾಕಾರನ ಪದಕಮಳಂ ಮಾಳ್ಕೆ ಮಾಂಗಲ್ಯಮೊಂದಂ ॥೧॥

ಕನ್ನಡಮುಂ ದ್ರಾವಿಡಮುಂ ।
ಮುನ್ನಿನ ಜಿನಕವಿಗಳೊಂದು ಸಾಮರ್ಥ್ಯದಿನಿಂ ॥
ದುನ್ನತಿಯುಂ ಪಡೆದುವೆನಲ್ ।
ಬಿನ್ನಣಮಂ ಮೆರೆದರಾರೊ ಜಿನಕವಿಗಳವೋಲ್ ॥೨॥

ಅವರೊಳ್ ಪಲಬರ್ ಧರಣೀ ।
ಧವರಂ ಸನ್ಮಾರ್ಗದೊಳಗೆ ನಿರಿಸುವಿನಂ ಭೂ ॥
ಭುವನಂ ನಿಜಯಶದಿಂದಂ ।
ಧವಳಿಸುವಿನಮೊಲ್ದು ಪೇಳ್ದರರಸೊಳ್ವರಿಯುಂ ॥ ॥೩॥

ಆಮರ್ದಿಂ ತಮಿಳುಂ ದರ್ಪಣ ।
ದಮಳಂ ಕನ್ನಡಮುಮಾದುವೆನಲೀಯೆರಡುಂ ॥
ಸಮಮಿವರೊಳ್ ಪಲವಿರ್ದಪು ।
ವಮರ್ದಿನವೋಲ್ ಧರ್ಮಮಂ ನಿಬೋಧಿಪ ಕೃತಿಗಳ್ ॥೪॥

ಅವರೊಳ್ ನಾಲಡಿಯೆಂದೆಂ ।
ಬುವ ಕೃತಿಯುಂ ತಮಿಳ ಬಲ್ಲಹರ್ ಪಿರಿದುಂ ಮ ॥
ಚ್ಚುವರಾ ಕೃತಿಯುಂ ಕನ್ನಡಿ ।
ಸುವ ಬಗೆಯಿಂದೆರಗಿದಪ್ಪೆನಾಸರಸತಿಗಾಂ ॥೫॥

ಎನಸುಂ ಮಾಳ್ಕೆನ್ನ ಕಾವ್ಯಕ್ಕುರೆ ಸರಸತಿ ಸಂದಿರ್ಪ್ಪಸನ್ನಾಕ್ಕಿಸೊಂಪೊಂ ।
ದನೆಯುತ್ತ್ಯುತ್ಸಾಹದಿಂ ಮಾರ್ಗವಿದರ ಸವಿಮಾನಾಡ ಕೀರ್ತ್ತಿಗೆಳೆಯಿಂಪೊಂ ॥
ದನೆ ಘೋರಾರಣ್ಯದೊಳ್ ಸಂಪದಮುಳಿಯುದರ್ಕೈತೀಭ ಸಿಂಹೇಂದ್ರನಾರ್ಪ್ಪೋಂ ।
ದನೆ ದೀವ್ಯದ್ಧಾಟಿಯಿಂ ಸೀರ್ವ್ವಡೆಗಳ ನಡೆವಂಭೋಧಿಯಾ ಗುಣ್ಪನೊಂದಂ ॥೬॥

---

ಸುರಚಾಪೋಪಮಮೆಯ್ದೆ ಜೀವನಿರವೆಂದೀ ಲೋಕಮುಂ ಬಟ್ಟಿದ ।
ಸ್ಥಿರಮೆಂದುರ್ವ್ವರೆ ಸೋಂಕದನ್ನೆಗಮಣಂ ತನ್ನಾಪ್ತಿನಿಂದಂ ಪದಾಂ ॥
ಬುರುಹಂ ನಿಂದನನಾವಗಂ ಮಣಿಪೆಪೆಮ್ಮಾತ್ರ ಕಾರ್ಯ್ಯ ಸಂಸಿದ್ಧಿಗಾ ।
ದರದಿಂ ಪೆಂಪನೊಡರ್ಚ್ಚುಗಂಘ್ರಿಕಮಳಂ ಶ್ರೀಮಜ್ಜಿನಾಧೀಶನಾ ॥೭॥

## ೧. ಧರ್ಮಂ.

ತುರುಗಿದ ಷಡ್ರಸದೊಡನ ।
ಳ್ಕರಿಸುಣಿಸಂ ಮನೆಯೊಳವನ ಸತಿಯೊಲವಿನಿಸಿಡಲ್ ॥
ತೊರೆದೋರೊಂದೆಡೆಯೆಳ್ತಾಂ ।
ತಿರಿದುಣ್ಬಂ ಕೂಳನೆಂದೊಡೈಸರಿ ನೆಲೆಯೇಂ ॥೧॥

ದುಗುಡವ ನುಳಿದೈಸಿರಿ ತನ ।
ಗೊಗೆದಂದುಣ್ಪುದು ಪಲಂಬರೊಡನೊಳ್ಳುಣಿಸಂ ॥
ಮಿಗೆ ತೊಲಗದಾರೊಳಂ ಕೆ ।
ಮ್ಮಗೆ ನಿಲ್ಲದು ರಥದ ಚಕ್ರಮೆನೆ ಸಿರಿ ತಿರಿಗುಂ ॥೨॥

ಆನೆಗಳನೇರಿ ಬೆಳ್ಗೊಡೆ ।
ತಾನಿರೆ ಸೇನಾಧಿಪತಿಗಳೇಳ್ತರೆ ಬೀರೊಂ ॥
ದೇನಾಸುಮಾಗೆ ಬಿಳ್ದಹಿ ।
ತಾನೀಕಂ ಕೊಳ್ಪುದಲ್ತೆ ತಮ್ಮರಸಿಯುರಂ ॥೩॥

ಸಂದುವು ಸಂದುವು ನೀಂ ಬಾ ।
ಳ್ವೊಂದು ದಿನಂ ನಿಲ್ಕುಮೆಂದುದೆಲ್ಲಂ ಸಲ್ಗಂ ॥
ಬಂದಂ ಬಂದಂ ಜವನಿಂ ।
ದೆಂದೊಲವೆತ್ತರನನೀಗಳುರೆ ಮರೆವುದು ನೀಂ ॥೪॥

ಏನಾನುಮೊಂದನೊಂದಿರೆ ।
ತಾನಿದು ಮುಂದೊದವಲಪ್ಪುದೆನ್ನದೆ ಮುನ್ನಂ ॥
ದಾನಂಗೆಯ್ದುರ್ ಜವನಾ ।
ಕಾನನದೊಳ್ ಸಿಲ್ಕದೊಯ್ಯನೊಯ್ಯನೆ ಪೋಪರ್ ॥೫॥

ತಿರೆಯೊಳೆಗೆಳೆದ ದಿನಂಗಳ ।
ನಿರದೆ ಬಳಿಕೆ ಮೇಲೆ ಬಾಳ್ವರಿಲ್ಲಿಲ್ಲದರಿಂ ॥
ಪುರುಳಂ ಬಯ್ಕಿಡದೀಸ್ಪದೆ ।
ಸರಿ ಮರಣಂ ನಾಳೆಯೆಂದು ಪರೆ ಕರಮುಲಿಗುಂ ॥೬॥

ಆಳೆದಳೆದು ನೋಸರೆನಿಸುವ ।
ಕೊಳಗದೆ ನಿಮ್ಗೊಂದು ನಾಳ್ಗಳಂ ಜವನುಣ್ಬಂ ॥
ತಿಳಿದರಸಂ ಮೆರೆವುದು ನೀ ।
ಮಿಳೆಯೊಳಗಂತಲ್ಲದಾರುಮುದಯಿಸಿ ಫಲಮೇಂ ॥೭॥

ಮಿಗೆ ಸಿರಿವಳರೆಂದು ಬೆರೆದು ।
ಬಗೆದರಿವಿಲ್ಲದೆ ನೆಗಳ್ದ ಪರಲೋಕವನಿಂ ॥
ಬಗೆಯದೆ ಬಾಳ್ವರ ಸಿರಿ ತೊಲ ।
ಗುಗುಮಿರುಳೊಳ್ ಮುಗಿಲಿನೊಗೆದ ಮಿಂಚಿಂಬಿನೆಗಂ ॥೮॥

ತಿನ್ನದೆ ಸತ್ಕೃತಿಯುಂ ಗೆಯ ।
ದಿನ್ನೆಲ್ಲರ್ ಪೊಗಳ್ವಪೋಲೊಡರ್ಚದೆ ಪೆರರಾ ॥
ಬನ್ನಮನಳಿಯದೆ ಕಾದೊಡೆ ।
ತನ್ನೊಂದ್ಯೆಸಿರಿಯು ನಳಿದ ನೆನ್ಗಂ ಲೋಕಂ ॥೯॥

ಉಡದೆಯುಮುಣ್ಣದೆಯುಂ ತ ।
ನ್ನೊಡಲಂ ದಂಡಿಸುತೆ ಕುಡದೆ ಆರನಳಿಯುಲ್ ಬ ॥
ಯ್ಚಿಡೆ ಪಣಮುಂ ಮಲೆನಾಡಿಂ ।
ಗೊಡೆಯನೆ ಜೇನೆಯ್ಯನಿಟ್ಟ ಜೇಂಬುಳುವಂ ಕೇಳ್ ॥೧೦॥

## ೨. ಯಶಾವನೆಮುಷ್ಟಿರಂ.

ತೊರೆದರ್ ಬರ್ಪುದು ನರೆಯೆಂ ।
ದರನರಿತರ್ ಬಾಲ್ಯದಲ್ಲಿ ವಿಷಯಂಗಳ ನ ॥
ಳ್ಕರಿನರೆಬರ್ ಜವ್ವನದಿಂ ।
ದುರೆ ನಲಿವರ್ ಕೊನೆಗೆ ಕೋಲನೂರುತ್ತೆಳ್ವರ್ ॥೧೧॥

ಪರಿದತ್ತು ಕೆಳೆಯುಪಾಶಂ ।
ಕೊರಗಿತ್ತೊಲವಳ್ಕರುಳ್ಳರೊಳ್ ಬಂಧನಮುಂ ॥
ಮುರಿದತ್ತಿರಪಿಂದೇಂಫಲ ।
ಮರಿ ನಿನ್ನಳಲಬ್ಧಿಗಾಳ್ದ ನಾವೆವೊಲಲ್ತೇ ॥ ॥೧೨॥

ದನಿ ತಳ್ಗಿರೆ ಕೋಲೂರಿರ ।
ಲೆನಸುಂ ನಡೆಯುಡುಗಲುಡಿಯೆ ಪಲ್ ಪಳಿವಿನೆಗಂ ॥
ತನುವಂ ಬಿಡದಿರಲರಿಯದ ।
ತನುವಂ ಕಾವಗ್ಗ್ರ ಕಾಣೆ ನರನೊಳ್ವಳಿಯಂ ॥ ॥೧೩॥

ನಡುಗೆ ತಲೆ ತಳರ್ದ ತಾಳ ।
ಲ್ಕೊಡಲುಂ ತಮ್ಮಟ್ಟೆ ಪಿಡಿದಕೋಲಂ ಕೆಯ್ಯೊಳ್ ॥
ಪಿಡಿದೆಳ್ದು ಬಿಳ್ದು ನಡೆವಳ ।
ಮಡದಿಯ ನೀಕ್ಷಿಸಲೆನಿತ್ತೋ ಮುಮ್ಮಲಮರುಕಂ ॥೧೪॥

ಎನ್ನಯ ತಾಯಿತ್ತಲ್ ಬಿ ।
ಟ್ಟೆನ್ನಂ ತಾಂ ತನ್ನ ತಾಯುನರಸುತೆ ಪೋದಳ್ ॥
ಮುನ್ನಿನ ತಾಯುಂ ವಲಮುಂ ।
ತೆನ್ನಲ್ ತಾಯ್ಗುಗದೆ ತಾಯುನರಸುವಳಲ್ತೇ ॥೧೫॥

ತರಿವೆಡೆಯೊಳ್ ಪಂದಳಿರ್ಗಳ ।
ತುರುಗಲ್ ನರುಮಲರ ಮಾಲೆ ತರಿವನ ಕರದೊಳ್ ॥
ನೆರೆದಿರೆ ನಲವಿಂ ಮೇವಾ ।
ಮರಿಯೊಂದಾನಂದಮೆಲ್ಲಿತರನರಿತವರೊಳ್ ॥೧೬॥

ಫಲಮಿತ್ತು ಬಿಳ್ವ ಬನತರು ।
ಕುಲವೆಂದಾರಯ್ದು ಜವ್ವನಮನೆಳೆಯಳ ಕ ॥
ಣ್ಣಲರಂಬನದೊಂದಂಬೆಂ ।
ದೊಲಿಯದಿರಿಂ ಕೊನೆಗೆ ಕೋಲ ಕಣ್ಣಿಯನೆಂದುಂ ॥೧೭॥

ಎನಿತಾದುವು ವರ್ಷಂ ನಿಮು ।
ಗೆನಿತಿರ್ಪುವು ಪಲ್ಗಳುಂಡಿರಿರ್ಪ್ಪೆರ್ಗಳೆಯೊಳೇ ॥
ನೆನುತುಂ ತಾಂ ಕೇಳ್ವೀ ಜ ।
ವ್ವನದ ವಿಚಾರಂಗಳೊಳವೆ ಧರ್ಮಜ್ಞರೊಳೇಂ ॥೧೮॥

ಬಿರುಗಾಳಿ ಬೀಸೆ ಪಣ್ಗಳ್ ।
ಪೊರಗಾಗಿರಲುದಿರ್ಪುವಲ್ತೆ ನರುಗಾಯ್ಗಳುಮಿಂ ॥
ಕಿರಿಯರ್ ಮುನ್ನರಿದಪೆವಾ ।
ವರನನೆನದೆ ಬಂದಪೊಳ್ತಿನೊಳ್ ಮೆರೆಗರನಂ ॥೧೯॥

ಎಳೆದುಯ್ಯಲ್ಕಾರಯ್ವಂ ।
ಗಳ ಮಿಳ್ತು ಜನಂಗಳಂ ಪಲುಂಬಲ್ ಪೆತ್ತಳ್ ॥
ಎಳಗೂಸನುಯ್ವನೆಂದೊಡೆ ।
ತಿಳಿ ಮರೆಯದೆ ಕಳವನಂತಕನ ನಿರ್ದಯನಾ ॥೨೦॥

---

## ೨. ದೇಹಮಸ್ಥಿರಂ.

ಮಿನುಗುವಗಿರಿ ಪಡೆದಿಂದುವಿ ।
ದೆನಲ್ ಗಜಾರೂಢರಾಗೆ ಬೆಳ್ಗೊಡೆ ನೆಳಲೊಳ್ ॥
ಜನಪರ್ ನೆಗಳ್ದರ್ ಮಡಿದರ್ ।
ಕೊನೆಯೊಳೆನಲ್ ಸಾವನಿಳೆಯೊಳೇಸಿದರೊಳರೇ ॥೨೧॥

ಇಳೆಯೊಳ್ ನೀಂ ಬಾಳ್ವದಿನವ ।
ನಳೆವರ್ಕ್ಕಂ ನಿಮ್ಮ ಬಿಳ್ವ ದಿನಮೇಳದ ಮುಂ ॥
ತಿಳಿದರನಂ ಮೆರೆವುದು ನೆಲ ।
ದೊಳಗೆಂದುಂ ನೀಳ್ದು ಬಾಳ್ದರಿಲ್ಲೆತ್ತಾನುಂ ॥೨೨॥

ಪರಿಣಯನೋತ್ಸವಮೆನೆ ಮುಂ ।
ದಿರದೊಳ್ ಮೊಳಗಿದ ಮೃದಂಗಮುಂದಲ್ಲಿಯುವಂ ॥
ಮರಣಂಬೊಂದಲುಮುಲಿಗುಂ ।
ಕರಮೆಂದರನರಿತರಗಲರವರೊಳ್ಬಗೆಯುಂ ॥೨೩॥

ಮೊದಲೊಳಾಜಿಪರೊರ್ಮ್ಮೆ ತಮ್ಮಟೆಯುನಿನ್ನಿಂತೊರ್ಮ್ಮೆ ಬಾಜಿಪ್ಪರೇ ।
ನಿದನಾರಯ್ಕೊಡೆ ಮತ್ತೆ ಮೂರ್ಮ್ಮೆ ಮೊಳಗಲ್ ಬೆಳ್ವಟ್ಟೆಯುಂ ಸುತ್ತಿ ಪೊ ॥

ತ್ತಿದ ಬೆಂಗೊಳ್ಳಿಗೆ ಜೀಡಿನಿಂ ಪೊರಗೆತಾಂ ಸತ್ತಾತರಂ ಸಾವರು ।
ಯ್ವುದನೇವೇಳ್ವುದೆ ನಂತುಟಂತುಟಿನಲಿನ್ನೇನಿಪ್ಪುರ್ದೀ ಬಾಳ್ಕೆಯೊಳ್ ॥೧೪॥

ಸುತ್ತಿದ ನಂಟರ್ ಪುಯ್ಯ ।
ಲ್ಚುತ್ತಿರೆ ಪೆಣನಂ ಸ್ಮಶಾನ ಕುಯ್ಯ್ವುದ ನಾರ ॥
ಯ್ದುತ್ತುಂಟಿನೆ ಪಸೆ ನಿಂಗ ।
ಗ್ಗಿರ್ತ್ತಲ್ ಪೋ ಮಾಣ್ ಬಿಡೆಂದು ಪರೆ ಕರಮುಲಿಗುಂ ॥೧೫॥

ಭವಬದ್ಧಂಗಳಿನಾರ್ಜಿಸಿದ್ದರ್ ಫಲಮುಂ ತಾ ನಿಕ್ಕುವಂ ಬಂದುಣಲ್ ।
ತೊವಲಂ ಪೊಕ್ಕು ತೊಲಂಗಿ ಪೋದಬಳಿಕಂ ನಿರ್ಜೀವಿಯುಂ ಕಟ್ಟಿ ರ ॥
ಜ್ಜುವಿನಿಂದೆತ್ತುಗೆ ಮಂಡನಾವಳಿಗಳಿಂ ಮೇಣ್ ಸಿಂಗರಿಕ್ಕೆತ್ತಲಾ ।
ಶವಮುಂ ತಳ್ಳುಗೆ ಬೆಂಕಿಯೊಳ್ಸುಡುಗೆ ಮೇಗೇಬಾಳ್ತೆ ಸಿಂದಿಕ್ಕೆ ಮೇಣ್ ॥೧೬॥

ಪರಿಕಿಸೆ ಪಲಮ್ಮರ್ಯೊಡಲಂ ।
ಸರಿ ಸುರಿಯಲ್ ತೋರ್ಪ ನೀರ ಬೊಬ್ಬುಳಿಕೆಯವೋ ॥
ಲಿರೆ ಬಗೆದೀರ್ಚುವ ಧರ್ಮ್ಮ ।
ಜ್ಞರ ನಾದಂ ಪೋಲ್ವರೊಳರೆ ವಿಪುಳಾವನಿಯೊಳ್ ॥೧೭॥

ಮಲೆಯುತ್ತಲಾಡಿತೋರುವ ।
ನೆಲೆಯಿಲ್ಲದೆ ಮತ್ತೆ ನೀಗುವಾಮುಂಜುವೆನ ॥
ಲ್ಕಲೆವೊಡಲಿಂದೆನಿತಪ್ಪುದೊ ।
ಫಲಮನಿತಂ ಪೊರ್ದ್ದುಗಿಳಿಯೊಳುಳ್ಳನ್ನೆವರಂ ॥೧೮॥

ಅವಧರಿಸಲ್ ನರನಂ ಸಿಂ ।
ದವನೀಗಳ್ ಕುಳ್ತನೊರಗಿದಂ ಮಡಿದಂ ನೋ ॥
ಡು ವೊಡಲ್ ಕುಶಾಗ್ರಜಳಬಿಂ ।
ದುವೆನಲ್ಕಸ್ಥಿರಮಂತರಿಂ ಪುದುಂಗೊಳ್ಗರನಂ ॥೧೯॥

ನರನೆಯ್ದಿ ಕೇಳದವ ನಾ ।
ತರಮನೆಯುಂ ಪೊಕ್ಕು ಬಂಧುಗಳ್ಗಳಿದು ಕಳೇ ॥
ಬರಮುಂ ಸಾವಂ ವಿಹಗೋ
ತ್ಕರಮುಂ ತಮ್ಮೊಂದುಗೂಡನುಳಿವಂತಿರೆವೊಲ್ ॥೨೦॥

## ೪. ಧರ್ಮದ ಕೆಯ್ಮೆ.

ಕಳೆದ ಭವಂಗಳೊಳೆಸಗಿದ ।
ಮಳತಪದಿಂ ಒಂದ ಫಲಮೆನಲ್ಬಂದಿನ್ನೀ ॥
ಗಳುಮರನಂ ಮೆರೆಯದನೇ ।
ಸೊಳವುಗುಣನೆ ಪೊರಗೆ ನಿಲ್ಲದಾನಿಬ್ಬಣಮಂ ॥೩೧॥

ಸತತಂ ಬಾಳ್ದಪೆನುರ್ವಿಯೊಳ್ಸಿರಿದುಪುತ್ರ್ಯುತ್ಸಾಹದಿಂದಾದಮು ।
ಸ್ಥಿತಿಪೆತ್ತಿರ್ದ್ದಪೆನೆಂದು ಬಂಪಿಡಿದ ಮೋಹಧ್ವಾಂತದಿಂ ಧರ್ಮಪ ॥
ದ್ಧತಿಯಂ ತಪ್ಪಿರೆ ಬಾಳ್ಕೆ ನಾಳೆಗುಮೆಂದಾನುಂ ವಲಂ ನಾಣೆಸಲ್ ।
ಧೃತಿಯೆತ್ತಣ್ದಾದನೇಪೆ ನೀಂ ಮನಮೆ ಕಿಂಕರ್ತ್ತವ್ಯತಾ ಮೌಢ್ಯದಿಂ ॥೩೨॥

ಮುನ್ನಿನಭವದೊಳ್ ರಚಯಿಸ ।
ಲನ್ನೆಯುಮಂ ಫಲಮನುರ್ಣ್ಣೆನೆನ್ನದೆ ಪಿರಿದುಂ ॥
ಒನ್ನದೆ ಮಱಗುವ ಗಾವಿಲ ।
ನಿನ್ನೇಂ ಪೋಲ್ತಪನೆ ಕರ್ಮ್ಮಸೀಮೆಯುಂ ದಾಂಟಿದರಂ ॥೩೩॥

ಎನಸುಂ ಪಳಿದೊರೆಸವೊಸ ।
ರ್ಪನೆಗಂ ಸೀರಸದ ದಂಟು ನಿಲ್ವನೆಗಂ ಕ ॥
ರ್ಪನದೆಂತಂತರನೆನಿಸುವ ।
ಘನಮಂ ಪಿಳಿದೆಸೆಗೆ ಪಡೆಯಲರಿದೆನಿಪೊಡಲಂ ॥೩೪॥

ಸಿರಿದಿಕ್ಕುದಂಡದಿಂ ಸ .
ಕ್ಕರೆಯಂ ಪಡೆದಂಗೆ ದಂಟನುರಿಯಿಸಿಲಳಲೇಂ ॥
ಕರಮುರಸಂ ಗಳಿಸಿದ ಸ ।
ತ್ಪುರುಷರ ತನುವಳಿಯಲಂತಕನ ಬಾಧೆಯೊಳೇಂ ॥೩೫॥

ಅಂದಿಂದುಂದೆಂದೆನ್ನದೆ ।
ಬಂದುದು ಜೆನ್ನಷ್ಟ್ಟಿ ಜವನ ಕಾಳ್ಗೋಣವೆನು ॥
ತ್ತೆಂದುಂ ಮೆರೆದರನಂತ ।
ನ್ನೊಂದು ಪ್ರಾರಬ್ಧಕರ್ಮಮುಂ ಮಾಣ್ಗೆನರಂ ॥೩೬॥

ನರನೀ ಮಾನವ ಜನ್ಮದಿಂದೆ ಪಡೆಯಲ್ವೇಳ್ಪಾಸುಖಾನೀಕಮಾ ।
ದರದಿಂದಂ ಪಲವುಂಟೆನುತ್ತು ಮೊರೆವರ್ ಶಾಸ್ತ್ರಜ್ಞರಲ್ಲೀವಸುಂ ॥
ಧರೆಗೊಪ್ಪುತ್ತಿರೆ ಸಪ್ತಧಾತುಮಯಮಾದೀ ದೇಹಸೌಖ್ಯಕ್ಕನಾ ।
ದರಮಂ ತೋರಿ ಯೊಡರ್ತ್ತ್ವಗೆಂದುಮೊಲವಿಂ ಸತ್ಕರ್ಮ್ಮಮಂ ಧರ್ಮಮಂ ॥೩೭

ಪರಿಕಿಸೆ ಬಿತ್ತದು ಕಿರಿದಾ ।
ಗಿರಿಯುಂ ಬಿಡೆ ಬಳೆದುಗಗನಮುಂ ಚುಂಬಿಸುವಂ ॥
ತಿರೆ ನೆಳಲೀವೊಂದಾಲದ ।
ಮರನಂತಪ್ಪುದು ನಯಜ್ಞರಿಂ ಧರ್ಮ್ಮಫಲವಂ ॥೪೮॥

ಅನುದಿನಮುಂ ಕಳೆದೊಡೆ ದಿನ ।
ದಿನಕೆನ್ನಾಯುಷ್ಯಮಂತು ಕಳೆವುದೆನುತ್ತುಂ ॥
ನೆನೆಯದೆ ನೆರೆದುದು ದಿನಮುಂ ।
ದೆನುತುಂ ನಲಿವರ್ ಪಲಂಬರೆಗ್ಗರ್ ಧರೆಯೊಳ್ ॥೪೯॥

ಎರೆದೊಡಲಂ ಪೊರೆವಂ ಲೋ ।
ಗರಪಳಿವಂ ಬಗೆಯದಿರ್ಪ್ಪಮೆಂದೊಡೆ ವಿಶ್ವಂ ॥
ಧರೆಯೊಳ್ ಸ್ಥಿರಮೆಂದು ಕಳೇ ।
ಬರಮುಂ ನೀಂ ಕಾವುದೆಂದು ಪೇಳ್ವವನಾವೊಂ ॥೫೦॥

## ೫. ದೇಹಮಶುದ್ಧಂ.

ಕೊಳೆತು ನೊಳನೆರಂಕೆಯ ನಿ ।
ತ್ತಳಿಯೆ ತೊವಲ್ಪುಗ್ಗೆ ಬರ್ಪ್ಪ ಕಾಗೆಯಸೋವಲ್ ॥
ಗಳೆವೇಳ್ಕು ಮೊಡಲ್ಗೆಂದೊಡ ।
ಮುಳಿಗುವರೇಕೆಳೆಯಳೆಂದು ಗಾವಿಲರಿಳೆಯೊಳ್ ॥೫೧॥

ಒಡಲಿದು ತೋಲುಡೆಯುಂ ತಾಂ ।
ಪಡೆದಿರ್ಕ್ಕುಂ ರಂಧ್ರಮುದರೊಳಿರ್ಪ್ಪುವನೇಕಂ ॥
ಕಡುಬೇಸರಮುಂ ಜನಿಯಿಸು ।
ವೊಡಲಿಂಗೇತರ್ಕ್ಕೆ ಮರುಗುತಿರ್ಪ್ಪರೊ ಮರುಳರ್ ॥೫೨॥

ಮಿಗೆ ತರ್ಕ್ಕೋಲದ ಮಲರ್ಗಳ್ ।
ನಗಿಯೆ ತುರುಬು ನೆರೆಯೆ ಸೂಡೆ ಪೂವಂ ತನಗಂ ॥
ತಗದಂತೆ ಸಿಂಗರಿಸೆ ನಾ ।
ರುಗುವಮಾಗಳುಮೆಂದು ತಿಳಿಯದುಳಿದರೆ ಸತಿಯುಂ ॥೫೩॥

ತಿಳಿ ನೀರೊಳೊಗೆದ ಕುವಲಯ ।
ಮುಳಿಯಲ್ ವೇಲಾಯುಧಂ ವಲೀ ಕಣ್ಣೆನುತುಂ ॥
ಒಳರಲ್ ನಂಬೆಂ ಕಣ್ಣದು ।
ತಿಳಿನೀರಂ ತೊರೆದ ತಾಳೆವಣ್ಣಂದರಿವೆಂ ॥೫೪॥

ಎಲ್ಲರುಮರಿಯೆ ಸುಡುಂಗಾ ।
ಡಲ್ಲಿಯು ಪಲ್ಲೆಲ್ಗಳೆಂದು ತಿಳಿಯದೆ ಮೂಢರ್ ॥
ಮೊಲ್ಲೆಮುಗುಳ್ ಮೇಣ್ ಮುತ್ತೆನೆ ।
ಸೊಲ್ಲಿಸಲಾಂ ನಂಬೆನೊಲಿಯೆನೆಂದುಂ ಪೆಣ್ಣಂ ॥೪೫॥

ಕರುಳಂ ಕೊರ್ವುಂ ತೊವಲುಂ ।
ನರಮುಂ ನೆಣನುಂ ರುಧಿರಮು ಮೆಲ್ಗಳುಮಲ್ಲ ॥
ಲ್ಲಿರಲಿಟ್ಟೊಡಲೊಳಗೆನ್ನಳೊ ।
ಧರಿಯಿಸಿದಳ್ ಬಾಡದೊಂದು ಪೂವಿನಸರಮಂ ॥೪೬॥

ತಿಳಿಯದಿರಲ್ ನವರಂಧ್ರಂ ।
ಗಳಿನೊಸರ್ದತ್ತಿತ್ತಲಲೆಯೆ ಕೊಳೆ ಬೀಸುವಕೆ ॥
ಯ್ಗಳನೆಗ್ಗರ್ ಪಿರಿದೀಕ್ಷಿಸಿ ।
ನಳಿದೋಳ್ಗಳ್ಗತ್ತುಮೋಹದಿಂ ಮೆಯ್ಮರೆವರ್ ॥೪೭॥

ಕಂಡಿರಲಿದು ದುರ್ಗಂಧದ ।
ಬಂಡಿ ಮುರಿಯುಲಚ್ಚು ಸೆರೆದು ಪರ್ದುಂ ಮರುಳುಂ ॥
ಪಿಂಡಾಗೆತ್ತಂ ಕುತ್ತುಗು ।
ಮಂಡಲೆವಿನಮೇಕೆ ಗಂಧಮುಂ ಪೂಸರಮುಂ ॥೪೮॥

ತೊಲಗಿರೆ ಕಣ್ಕಳಿಯೊಳ್ ಕ ।
ಣ್ಮಲೆಯುಲೊಡಂ ನೋಳ್ಪರಂ ಕರಂ ನಗುವಾಸಂ ॥
ದಲೆ ಯಿನಿತಿನಿತೇ ಇರವಿಸ ।
ಸೆಲೆ ಮರೆಯಿರಮರನನೆಂದು ಸಾರುಗುಮಾರ್ಗ್ಗಂ ॥೪೯॥

ತನುವಂ ನೀಗಿದರೊಂದು ಪಂದೆಲೆಯೆ ಶಂಕಾತಂಕಮಂ ನೋಡೆ ತಾ ।
ಳ್ಪಿನೆಗಂ ನಕ್ಕು ಶರೀರಮಸ್ಥಿರಮೆನುತ್ತುಂ ಮೋಹಮಂಬಿಟ್ಟು ಬಂ ॥
ಧನಮಂ ಬೇರ್ಕೆಯೆ ಸಾರುವಂತಿರುಲಿಗುಂ ಬೇರ್ಕೆಯ್ದು ತತ್ವಜ್ಞರೀ ।
ತನುವಂ ಕಡ್ಡಿಗೆ ಸಾಟಿಯೆಂದು ಬಗೆವರ್ ಬೇರೇನುಮಂ ಲೆಕ್ಕಿಸರ್ ॥೫೦॥

---

## ೬ ವಿರಕ್ತಿ.

ತವೆ ದೀಪದೆ ಕತ್ತಲೆ ತೊಲ ।
ಗುವವೊಲ್ ತೊಲಗುವುದು ತಪದೆ ನಿಲ್ಲದೆ ಪಾಪಂ ॥

ಕವೆ ತೈಲಂ ದೀಪಂ ನಂ ।
ದುವವೊಲ್ ತಪಮಳಿಯೆ ಪಾಪತಿಮಿರಮೆ ನಿಲ್ಕುಂ ॥೫೧॥

ಸ್ಥಿರಹೀನತೆಯುಂ ನೋವಂ ।
ಜರೆಯುಂ ಸಾವಂ ತೆಮುಳ್ದುಚಿತಮುಂ ಧೀಮಂ ॥
ತರೆಸಗಿದರ್ ಸತತಂ ಮೂ ।
ಧರದೇಕೋದುವರೊ ಶಬ್ದಮುಂ ಜ್ಯೋತಿಷಮುಂ ॥೫೨॥

ಎನಸುಂ ಸಂಸೃತಿಯುಂ ಜ ।
ವ್ವನಮುಂ ವಾಗ್ಧಾಟಿಯುಂ ಬೆಡಂಗಂ ಪೆಂಪಂ ॥
ಧನಮುಂ ತೊರೆದರ್ ನಶ್ವರ ।
ಮೆನುತುಂ ಧೀಮಂತರುಳಿದು ಮಮತೆಯುನೆಂದುಂ ॥೫೩॥

ಸತತಂ ಸಂಕಟಮೊಂದಿಯುಂ ಕಿರಿದು ಬೇಗಂ ಸೌಖ್ಯಮುಂ ಪೊಂದೆ ಸಂ ।
ಸೃತಿಯೊಳ್ ಪಾರುವರೆಗ್ಗರಲ್ತೆ ನಿಡಿದುಂ ಕಣ್ಣಾರ್ವಿನಂ ಕ್ಲೇಶದು ॥
ಸ್ಥಿತಿಯಂ ನೋಡಿ ಸುಖಂ ಲವಂ ಗಡಮೆನುತ್ತಾರಯ್ದು ಮುಂ ಮಾಯ್ದುಶಾ ।
ಶ್ವತಮಂ ಸಂಸೃತಿಯುಂ ತೆಮುಳ್ದು ತುಳಿದರ್ ಧೀಮಂತ ಸತ್ಯವ್ರತರ್ ॥೫೪॥

ಬರಿದೆ ಕಳೆದತ್ತು ಬಾಲ್ಯಂ ।
ನೆರೆವುದು ನರೆ ನಾಡೆ ನೋವು ಕೂಡುಗುಮಿನ್ನಾ ॥
ವರನೊಳ್ಪಳಿಯುಂ ನಡೆವೊಡೆ ।
ತೊರೆದು ಕಳಂಕಮನೊಡರ್ಚ್ವುದ ಕೆಲಜಂ ಮನಮೇ ॥೫೫॥

ಸುದತಿಯುನಪುತ್ರೆಯುಂ ದು ।
ರ್ಮದೆಯುಂ ಗುಣಹೀನೆಯಾದೊಡಂ ಬಿಡಲರಿದ ॥
ಪುದರಿಂ ದ್ರಾವಿಡ ಕವಿಗಳ್ ।
ಮದುವೆಗೆ ಕಡೆಯೆಂದು ಪೆಸರನಿಟ್ಟರ್ ಮೊದಲೊಳ್ ॥೫೬॥

ಎನಿತಡಸಿದೊಡಂ ವಿಘ್ನಂ ।
ಮನಮುಂ ಮುಂದಿಕ್ಕಿ ಗೆಲ್ದು ವಿಘ್ನವನೆಲ್ಲಂ ॥
ತನತುತಪಂ ಕಿಡದಂತಿರ ।
ಲೆನಸುಂ ಸದ್ವೃತ್ತಿಯುಳ್ಳನವನೆ ಗುಣಾಢ್ಯಂ ॥೫೭॥

ಪಳಿದೊಡೆ ಲೋಗರ್ ತಮ್ಮಂ ।
ಪಳಿವಂ ಕೆಯ್ಕೊಂಡು ಮತ್ತೆ ಪಳಿದರ್ ಮುಂ ಬಿ ॥
ಳ್ದಳಿವರ್ ರೌರವದೊಳಗೆಂ ।
ಬಳಲಿಂದಂ ಮರುಗಿ ಕರಗುವರ್ ಗುಣವಂತರ್ ॥೫೮॥

ಅವಯವವೈದಂ ತವಿಸು ।
ತ್ತವರ್ಕೈದುಂ ವೃತ್ತಿಯುಂ ತಿರಸ್ಕರಿಸಿ ತೆವು ॥
ಳ್ದವರಲ್ತೆ ತಪಃಫಲಮಂ ।
ತವೆ ಪಡೆವರ್ ತಾವೆ ನಿಶ್ಚಯಂ ನಿಬ್ಬಣಮಂ ॥೫೯॥

ಅರೆಯೆ ಸೇದೆಯೊಂದೆ ಮಿಗೆ ವರ್ಪುದು ಜೀವಿಗೆಯೊಂದುಮಲ್ತೆಸಂ ।
ಸಾರದೊಳೆಳ್ಳನಿತ್ತು ಸುಖಮಿಲ್ಲಮದಂ ನೆರೆ ಕಂಡು ಕಂಡದಂ ॥
ಪಾರುತುಮಿರ್ಪ್ಪ ಮೂಢರಿರಲಿಂ ಸುಸುಸಂತತಿ ತಮ್ಮನೆಯ್ದಿಯುಂ ।
ಪಾರದೆ ದುಃಖದಂಕುರಮನುತ್ತಮರಲ್ಲಿಯೆ ಕಂಡುಬಿಟ್ಟಪರ್ ॥೬೦॥

## ೭. ಕೋಪಂ.

ತಿಳಿದವರಂ ಪೊಗಳ್ಗೆ ಜನಂ ।
ತಿಳಿಯದೆ ಮೇಣ್ ಪಳಿಗೆ ನಾಡೆ ತಲೆಮುಟ್ಟೆ ನೊಳಂ ॥
ತಿಳಿಯದ ತುಳಿದೊಡೆ ಮುಳಿವರೆ ।
ತಿಳಿದರೆನಲ್ ಮುಳಿಸನುಳಿವುದುಂ ಲೇಸಲ್ತೇ ॥೬೧॥

ಎಡರಡಸಿದೊಡಂ ತಪಮಂ ।
ಬಿಡದೆ ನಿಲಲ್ ಬಲ್ಲಧೀರರರಂ ಬರಿಕೋಡೆಂ ॥
ತಡಸೆಯುವೊಡಲಂ ಪೊರೆವೊಡೆ ।
ಬಿಡುವರೆ ಕಂಡಂತಿರಲೆಯಲೆತ್ತಂ ಮನಮಂ ॥೬೨॥

ಓವದೆ ಬಾಯುಂ ತೆರೆದಿರ ।
ಲೋವದ ಸೊಲ್ ಕೇಳ್ದರಂ ವಲಂ ಸುಟ್ಟಪುದೆಂ ॥
ದೋವುವರಲ್ಲದೆ ಕೋಪದೆ ।
ತೋಪಿದರೆತ್ತಾನುಮುಸಿರರೊರೆಯದ ಸೊಲ್ಲಂ ॥೬೩॥

ಕಮಗೀಡಿಲ್ಲದರಾಡೆಯುಂ ತಗದ ಮಾತಂ ತಮ್ಮನೆತ್ತಾನುಮು ।
ತ್ತಮರೋರಂತಿರೆ ಬೇಸರಂ ಪಡೆಯರಲ್ಲತ್ತರ್ಮ್ಮಸಂತಾಡಲಂ ॥
ದೆ ಮನಂಗೊಂಡಿರದಾರ್ದ್ದ ಚೇರ್ದ್ದ ತಿಳಿವಂತೂರಾತರೆಲ್ಲರ್ಗೆ ಸಾ ।
ರಿ ಮರಂಮುಟ್ಟೆ ಸಿಡಿಲ್ದು ಕೂಗಿಯೊರೆವರ್ ಕೆತ್ತುತ್ತೆ ದಿಗ್ಭಿತ್ತಿಯುಂ ॥೬೪॥

ಕಿರಿಯರನಯಮದು ವಿನಯಂ ।
ತೊರೆಯಲ್ಕೇನಾನುಮಿಲ್ಲದಂ ಕುಡೆ ಕೊಡೆ ತಾಂ ॥
ನೆರೆಗೆಲಲೆಲ್ಲರ ನರಿದಂ ।
ಪೆರರಾಡಿದನುಂತೆ ಪೊರೆದೊಡದು ಪೊರೆಯೆಸಿಕುಂ ॥೬೫॥

ತದೆದಾಮಂತ್ರಿಪ ಬೂದಿಯಿಂ ಪೆಡೆಯುಡಂಗಲ್ ಕೆಮ್ಮನಿರ್ಪೊಂದುನಾ ।
ಗದವೊಲ್ ದುರ್ಜನರಿಂದೆ ಬಾಧೆವಡೆದುಂ ತಂತಮ್ಮ ಸಚ್ಛೀಲಸಂ ॥
ಪದಮಂ ಮಾಣದೆ ಶತ್ರುಮಿತ್ರರಿವರೆಂದಾರಯ್ಯದಲ್ಪೋಕ್ತಿ ತಾ ।
ಗಿದೊಡಂ ಸೈರಿಸೆ ಪೇಳ್ವುದಂತದನವರ್ ಸದ್ವಂಶಜರ್ ಶಾಂತಿಯಿಂ ॥೧೬॥

ಪಗೆಯು ನಿದಿರ್ಚ್ಚ ಮಾರ್ಮಲೆವ ಸಾಹಸಮಿರ್ದ್ದೊಡಮೊಲ್ಲೆವೆಂದುಕೆ ।
ಮ್ಮಗೆ ಬಿಡಲೆಮ್ಮ ಕೈಮೆಯುರಿದರ್ ಪೊಗಳ್ವಂತರಿನಾರ್ದ್ದು ಕೋಡನೇ ॥
ಬಗೆಯುದೆ ತೀರ್ಚ್ಚವಂ ಪಗೆಯುನೆನ್ನದೆ ಸುಮ್ಮನಿರಿರ್ದ್ದ ಕೋಪಮಂ ।
ಮಿಗೆ ನಗುವಂತೆ ಮಾಣ್ಬುದೆ ನಯಜ್ಞರಮಾರ್ಗಮಿದೆತ್ತಮುರ್ವ್ವಿಯೊಳ್ ॥೧೭॥

ಕಿನಿಸದು ದುರ್ಜನನೊಳ್ ಪಲ ।
ದಿನಮಿರ್ದ್ದೊಡಮಂತಮಿಲ್ಲದಂತಿರೆ ಬೆಳೆಗುಂ ॥
ಮುನಿಗಳ ಮುನಿಸದು ಬೆಸ್ನೀ ।
ರೆನೆ ಬೇಗಂ ಕಾಸಿದಂದೆ ತಣ್ಣನೆಯುಕ್ಕುಂ ॥೧೮॥

ಉಪಕಾರಮನೊಡರಿಸೆ ತಮ ।
ಗಪಕಾರಮನೆಸಗಿದಂಗೆ ಮತ್ತೆಣಿಸುವರೇ ॥
ನಪಕಾರಮನೆತ್ತಂ ತಮ ।
ಗಪವರ್ಗ ಶ್ರೀಯುನೊಲ್ವ ಸತ್ಕುಲಜಾತರ್ ॥೧೯॥

ಕರ್ಚ್ಚಲೊಡಂ ನಾಯ್ ಕೋಪಿಸಿ ।
ಕರ್ಚ್ಚದರಾರ್ ಮತ್ತೆ ನಾಯುನಿಳಿಯೊಳಗೆ ಜನರ್ ॥
ಪೆರ್ಚ್ಚದರಂ ಪಳಿದೊಡೆ ಬಗೆ ।
ದೀರ್ಚ್ಚವನೆಂದಲ್ಪರಲ್ಲಿ ಮುಳಿವರೆ ಪಿರಿಯರ್ ॥೨೦॥

---

## ಸೈರಣೆ

ತೀತಳದೇಶಾಧೀಶ್ವರ ।
ನೀತಿಯನುಳಿದಾತನಲ್ಲಿ ನೀಂ ನುಡಿಯದಿರೇ ॥
ಆತಂ ನುಡಿದೊಡೆ ಕಡುಮುಳಿ ।
ದಾತಂ ನುಡಿದಪ್ಪನವನನುಳಿವುದೆ ಧರ್ಮಂ ॥೨೧॥

ತಗದವರಾಡುವ ನುಡಿಯಂ ।
ಬಗೆಯದೆ ಸೈರಿಸುವುದುತ್ತಮಂ ತಾಳದಿರಲ ॥
ಪೊಗಳರ್ ಜನಮವನಂ ಸು ।
ಮ್ಮಗೆ ಪಳಿಯದಿರರ್ ಸಮಸ್ತ ಜಗತೀತಳದೊಳ್ ॥೨೨॥

ಆಳಿನಿಗಳಿಂಚರಂಬೊರೆದು ತೋರುವ ಪುಷ್ಪಲತಾವಿತಾನ ಮಿ ।
ಟ್ಟಳಿಸಿರೆ ವಾರ್ಧಿಮೇಖಳೆಗೆ ವಲ್ಲಭ ಯೆಮ್ಮಭಿವೃದ್ಧಿಯುಂ ಪುದುಂ ॥
ಗೊಳಿಸದೆ ನೋಡಲೋಪ್ಪುವಹಿತರ್ಕ್ಕಳ ನಲ್ನುಡಿಯಿಂದಮೆಯ್ದೆವೆ ।
ಗ್ಗಳಿಸದಕೇಡನೆಂತು ಪಡೆಗುಂ ಹಿತಕಾರಕಟೂಕ್ತಿ ಮೌಕ್ತಿಕಂ ॥೨೩॥

ಅಱಿದಱಿವುದನಡಗಿ ನೆಱೆ ಪೆ ।
ಳಱಿ ಪೆಳರ್ವೆಡೆಯೊಳಪ್ಪುಕೆಯ್ವ ತೆರದಿಂ ಕೆಯ್ಕೊಂ ॥
ಡರನಂ ತನಗಿರ್ದ್ದನಿತರೊ ।
ಳುರೆ ತಣಿದನ ಬಾಳ್ಕೆಗೆಂದುಮೆಡರಱಿದಲ್ತೆ ॥೨೪॥

ಇರಲಿರ್ವ್ವರ್ ನೇಹದಿಂ ತಮ್ಮೊಳಗಿನಿಸಿನಿಸುಂ ತಾರತಮ್ಯಂಗಳಂ ಮಾ ।
ಣ್ದಿರಲೊರ್ಬ್ಬಂ ಲೋಕನಿಂದಾರ್ಹಪನವಗುಣಮುಂ ಕಂಡೊಡಿನ್ನೊರ್ಬ್ಬನೊಳ್ ಸೈ॥
ಸಿರೆಯುಕ್ತಂ ಸೈಸುವನ್ನಂ ತಡೆದಿರಲಱಿದೆಂದಂದು ಬಿಟ್ಟಾತನೇ ಲೋ ।
ಗರೊಳೊಂದಂ ಪೇಳದಿರ್ಪ್ಪಂತಿರೆ ಸರಿಯೆನುತುಂ ಪೇಳ್ವರೋರಂತೆ ಬಲ್ಲರ್ ॥೨೫॥

ಒಡನಾಡಿಗಳೊಡರಿಸೆಯುಂ ।
ಕಿಡುಕಂ ಕಿಸುಗಣ್ಚಿಯುವರನಗಲಲ್ವೇಡಂ ॥
ಕಡುನೇಹಡೆ ನಂಬಿದರಂ ।
ಗಡ ನಿನ್ನೀಬಸದ ಮಿಗಕಮುಱಿದು ವಿಯೋಗಂ ॥೨೬॥

ಘುರುಘುರಿಸೆ ನಿರ್ಝರಪ್ರಕ ।
ರರವಂ ಮಲೆಯಾಣ್ಮ ತಮ್ಮನರ್ ಹಿತಕರರಂ ॥
ನೆರೆಯರೆ ಕೂರ್ವರ್ ಗಡ ಪಿರಿ।
ಯರನೆಣಿಸರ್ ತಮ್ಮತಪ್ಪನೆಂದುರೆ ಕಿಱಿಯರ್ ॥೨೭॥

ಬತ್ತಿರೆ ಪಸಿವಿಸಿನೊಡಲಂ ।
ಬತ್ತಿಸೆಯುಂ ತಿಳಿದರೊರೆ[illegible]ರೆಂದುಂ ಕಂಡೋ ॥
ವೃತ್ತಾತ್ತದಱಿಸದರೊಳ್ ತಾ ।
ಮುತ್ತಮರಂ ಕೇಳ್ವರಱಿದರಲ್ಲದೊಡುಳಿವರ್ ॥೨೮॥

ಒಂಗೊಡಮಿಂಪೆಡರಂ ನೆಱೆ ।
ದೊಂದಾಬಳಿಯೊಳ್ ಸಮಸ್ತ ನಿಂತೊಡಮಿಂಪುಂ ॥
ಬಂದೊಡೆ ಪಿರಿಯರ ಪಳಿಯದ ।
ಱಿಂದಂ ತೊರೆ ಬೇಗಮರಸ ನೀನಾ ಬಳಿಯುಂ ॥೨೯॥

ತನಗಕ್ಕುಂ ನಾಡೆ ಕೇಡೆಂದೊಡಮೆಣಿಸುವನೇಂ ಕೇಡನನ್ಯಂಗೆ ತನ್ನೀ ।
ತನುವಂ ಬಿಟ್ಟಂದೆ ಸಾವಂತಿರೆಯಿರೆಯುಮವಂ ದೇಹಮುಂ ಕಾಯೆ ಭಿಕ್ಷಾ ॥

ಟನೆಯುಂ ಮಾಡಲ್ಕದೇನುಜ್ಜುಗಿಪನೆ ತಗದಂತಿರ್ದ್ದರೊಳ್ ಬಕ್ಕ್ರಮಿಂ ಮೇ ।
ದಿನಿಯೆಲ್ಲಂ ತನ್ನ ಕೆಯ್ಗೆಂಡೊಡಮುಸಿರ್ದಪನೇನುತ್ತಮಂ ಮಿಥ್ಯೆಮೊಂದಂ ॥೮೦॥

---

## ೯. ಪಾರದರಂ.

ಅಳರಧಿಕಂ ಸುಖಮಲ್ಪಂ ।
ತಿಳಿ ದೊಡೆ ತಪ್ಪುಗುಮೆ ರಾಜದಂಡನೆ ಕಡೆಯೊಳ್ ॥
ತಿಳಿಕುಂಭೀಪಾಕಂ ನಾ ।
ಣುಳರದರಿಂ ನಚ್ಚದಿರ್ಕ್ಕೆ ಪರದಾರೆಯುರಂ ॥೮೧॥

ಪರಸತಿಗಳ್ಗೆಳಸೆ ನರಂ ।
ನೆರೆಯುವುವರಸುಂ ಪೊಗಳ್ತೆಯುಂ ಕೆಳೆಯುಂ ಮೆ ॥
ಯ್ಸಿರಿಯುಂ ಪಡೆವಂ ಭಯಮಂ ।
ವಿರೋಧಮಂ ನಿಂದೆಯುಂ ಮಲಂ ಪಾಪಮುಮಂ ॥೮೨॥

ಭಯಮೊಳಪುಗುವೊಡೆ ಕೊಂಬಂ ।
ಭಯಂ ಸಮಿಾಪಿಸೆಯುಮಳಸಿನೊಳಗಂ ಮತ್ತಂ ॥
ಭಯಮೊಳಕೆಯ್ವೊಡೆ ಭಯಮೆನೆ ।
ಬಯಸುವರೇತರ್ಕ್ಕೆ ಬರಿದೆ ಪರದಾರೆಯುರಂ ॥೮೩॥

ತಿಳಿದಾಗಳ್ ಬಿಡದೆಯ್ದುಗುಂ ನಿಜಕುಲಕ್ಕಂ ದುರ್ಯಶಂ ಸಿಕ್ಕಿದಾ ।
ಗಳೆ ಕಾಯ್ಪಿಂ ಕಡುಪೂಣ್ದು ಬಂದಧಟರಂಗಚ್ಛೇದನಂಮಾಳ್ಪರಿ ॥
ನ್ನೊಳಕೆಯ್ದಿರ್ದೊಡೆ ಮುನ್ನಮಾವರಿಕುಮೆತ್ತಂ ಪಾಪಮೆಂದಂದು ಕೆ ।
ಯ್ಯೊಳಲನ್ಯಾಂಗನೆಯಿಂದೆ ನೀನೆನಿತು ಬಾಳ್ದಯ್ ಭೋಗಮಂ ಪೇಳ್ವಲಂ ॥೮೪॥

ಕಳದ ಭವದೆ ಪೆರವೆಣ್ಣಂ ।
ಕಳಶಸ್ತನಿಯೆಂದು ಕೂಡೆ ದುಸ್ಸಂಗದಿನೀ ॥
ಗಳೆ ಬಂದು ನಪುಂಸತೆಯುಂ ।
ತಳೆದುದಯಿಸಿ ಕರ್ಮಫಲಮನುಂಡಪನಲ್ತೇ ॥೮೫॥

ತಿಳಿಯೆ ಜನಂ ಸಮುಹೂರ್ತಮ ।
ಮಳವಡೆ ಪಲಪಲವು ವಾದ್ಯಮುಂ ಮೊಳಗೆ ಶುಭಾ ॥
ವಳಿಯುಂ ಮರಿಯಿಸಿ ತಂದೆಳೆ ।
ಯುಳೆ ಮನೆಯೊಳಗಿರೆ ಪರಾಂಗನೆಯನೇಕೊಲ್ವರ್ ॥೮೬॥

ಪರವಧುವಂ ಕೂರ್ತ್ತಸುಖಂ ।
ಪಿರಿದು ತಿರಸ್ಕಾರಮೆತ್ತುಮುರ್ವ್ವರೆ ತನ್ನಾ ॥
ತರುಮಂ ತವಿಸೆ ಭಯಂ ನಾ ।
ಗರತಲೆಯುಂ ನಕ್ಕುವೊಂದು ಸುಖಮಂ ಪೋಲ್ಗುಂ ||೮೭||

ಉರ್ವ್ವಿಯೊಳೆಲ್ಲಿತು ಕಾಮಂ ।
ಸರ್ವ್ವಜ್ಞರ್ಗ್ಗಿರ್ದ್ದೊಡಂ ವಲಂ ಪರ್ವ್ವಗುಮೇಂ ॥
ಪರ್ವ್ವಿದೊಡಂ ಜಗಮೆಲ್ಲಂ ।
ಜರ್ವ್ವವಿಸಂ ನಿಲ್ಲದಳಿಗು ವೊಗೆದಾಕ್ಷಣದೊಳ್ ||೮೮||

ಎನಿತಳಲಿಸೆಯುಂ ಸುಡುಗುಂ ।
ತನುವನೆ ತಾಮುಲ್ತು ಅಂಬುಮಗ್ನಿಯುಮಿನಸುಂ ॥
ತನುವಂ ತವಿಸುತೆ ನಡುಗಿಸಿ ।
ಮನಮಂ ಸುಡುವೊಂದು ಬೇಟಮುಂ ಪೋಲ್ತಪುವೇ ||೮೯||

ಊರೊಳ್ ಪೊತ್ತುಳುರ್ದ್ದಳ್ವದಳ್ಳುರಿಯುನೆತ್ತಾಸುಂ ಜನಂ ಕಂಡೊಡಂ ।
ನೀರೊಳ್ ಮಿಂದು ಮುಳುಂಗೆ ತಣ್ಣನೊಡನಕ್ಕುಂ ಬೇವಕಾಮಾಗ್ನಿಯೊಳ್ ॥
ಪೋರಲ್ಕಾರ್ಪ್ಪರೆ ನೀರಿನೊಳ್ ಮುಳುಗೆಯುಂ ಕಂಡಂದೆ ನಿಟ್ಟೋಡಿ ಸ್ತ್ರೈ ।
ಲಾರೋಹಂಗೆಯೆಯುಂ ನಿಗಾಹಗುಹಮಂ ಪೊಕ್ಕಿರ್ದ್ದೊಡಂ ತೀರ್ಗ್ಗಮೇ ||೯೦||

---

## ೧೦. ಔದಾರ್ಯಂ.

ಇಲ್ಲದ ವೇಳೆಯೊಳಂ ತಮ ।
ಗುಲ್ಲಾಸದಿನಿರ್ಪ್ಪತೆರದೆ ಪರಿದೋವಿ ಕುಡಲ್ ॥
ಬಲ್ಲಗುಣಾಢ್ಯರ್ಗೊಳವೃಗೆ ।
ತೆಲ್ಲಂಟೆಯು ಬಾಗಿಲಾಗಳುಂ ತೆರೆದಿರ್ಕ್ಕಂ ||೯೧||

ಇದಿರೊಳ್ ಸಾಯ್ವೊಂದುನಾಳುಂ ಬರುತಿರೆಮುನಿಯಲ್ ಬರ್ಪ್ಪ ಮುಪ್ಪುಂಸಮಂತಿ।
ರ್ಪ್ಪದು ಕೇಡಂ ತರ್ಪ್ಪ ಜಾಡ್ಯಂಗಳುಮುರೆ ನೆರೆಗುಂ ಮಾಣದೆಂದೋವಿ ಸೌಭಾ ॥
ಗ್ಯದಗುರ್ಬ್ಬಿಂ ತೃಷ್ಣೆಯಿಂದಂ ಪಿರಿದು ತೊಳಲದುತ್ಸಾಹದಿಂದರ್ಥಮುಂತ ।
ಪ್ಪದನಾರಯ್ದಾಪದಿಂಬರ್ಪ್ಪಿರಸು ಸುಖದೆ ಮುನ್ನಣ್ಪುದುಳ್ಳಾಗಳೆಂದು ||೯೨||

ಎರೆದರ್ಗ್ಗಿತ್ತನುಭವಿಪಾ ।
ಪಿರಿಯರ ಸಿರಿ ಬೆಳೆದ ವೇಳೆಯೊಳ್ ಬೆಳೆಗುಂ ನಿ ॥
ಷ್ಠುರದಿಂದೀಯದ ಲೋಭಿಯ ।
ಸಿರಿ ಕರ್ಮ್ಮಕ್ಷಯದೆ ಪಿಡಿದೊಡಂ ನಿಂದಪುದೇಂ ||೯೩||

ಮುನ್ನೀರ್ ಸುತ್ತಿದ ನೆಲದೊಳ್ ।
ಮುನ್ನಿನ ಭವದಲ್ಲಿ ಯನ್ನಮುಂಕುಡದರ್ ತಾ ॥
ಮಿನ್ನಾದರ್ ತಿರುಕರೆನಲ್ ।
ನಿನ್ನುಳ್ಳನಿತನ್ನದಾನಮಂ ಮಾಡನಿಶಂ ॥ ॥೯೪॥

ಎನಿತಕ್ಕುಂ ಕುಡಲನಿತಂ ।
ತನಗಿಹಪರದಲ್ಲಿ ಫಲಮನೀಕ್ಷಿಸಿ ಕುಡಲಿ ॥
ನ್ನೆನಸುಂ ತತ್ಫಲಕಿಮ್ಮಡಿ ।
ಯೆನಿಸಿಲ್ಲದ ನೆರೆಯುದಿರ್ದೊಡೆಳ್ತಪ್ಪ ಫಳಂ ॥೯೫॥

ಕರುಮಾಡದೊಳಿರ್ದ್ದಪಲ ।
ಗರ್ರದೀವರ್ ನಾಡೆ ತಾಳೆಮರನನ್ನರೆನ ॥
ಲ್ಕೆರದೊಡವಿಮಾಯುದೆ ಪಿರಿದೈ ।
ಸಿರಿಯುಳ್ಳರ್ ಮಸಣದೊಂದು ಬಿರಿಮರನನ್ನರ್ ॥೯೬॥

ಮರೆಯಿಸೆ ವಿಮಾನಗಬ್ಬುನೆನಸುಂ ಸುರಹೊನ್ನೆಯು ಕಂಪು ನಾಡೆಯುಂ ।
ಮೊರೆವ ಮಹಾರ್ಣವಂ ಒಳಸಿದುವ್ವಿರ್ಯಧೀಶ್ವರ ಕಾಲಕಾಲದೊಳ್ ॥
ನೆರೆ ಮಳೆ ಬಾರದಿರ್ದೊಡೆ ನಯುಜ್ಞರನಾದರದಿಂದೆ ಮಾಣ್ದೊಡಂ ।
ದರನನದೆಂತು ಬಾಳ್ಗುಮೆರೆದಲ್ಲದೆ ಲೋಕದ ಜೀವಕೋಟಿಗಳ್ ॥೯೭॥

ಕುಡಲೆಂದಾನುಮಿನಿತ್ತುಂ ।
ಪಡಿಕುಡೆ ಕಡನೆಂಬರಲ್ತೆ ರೂಢಿಯೊಳಿನಿಸಂ ॥
ಕುಡಲಾರದವಂಗೆರೆ ದಾ ।
ಗಡೆ ಕೊಟ್ಟಲ್ಲೆನ್ನದಿರ್ಪ್ಪುದನೆ ಕಡನೆಂಬರ್ ॥೯೮॥

ಇದು ಕಿರಿದದು ತಾನಿಲ್ಲೆ ।
ನ್ನದೆ ಪಡೆದೊಡೆ ಧರ್ಮ್ಮ ಫಳಮನಿನಿಸಿನಿಸಂ ತುಂ ॥
ಬಿದತವಸಿಯು ಭಿಕ್ಷಾಪಾ ।
ತ್ರದವೊಲ್ ಮನೆಮನೆಗೆ ತುಂಬುವಂತಿರೆ ನೆರೆಗುಂ ॥೯೯॥

ಕೇಳಿಸುಗುಂ ಗಾವುದಮಂ ।
ಕಾಳೆಯ ದನಿ ಯೋಜನಕ್ಕೆ ಮೊಳಗುವ ಸಿಡಿಲುಂ ॥
ಕೇಳಿಸುಗುಂ ಮೂಲೋಕಕೆ ।
ಕೇಳಿಸುಗುಂ ಜಾಣರಿತ್ತರೆಂಬೊಂದುರವಂ ॥೧೦೦॥

## ೧೧. ಪ್ರಾಕ್ಕರ್ಮಫಲಂ.

ಎಳೆಗರು ಪಲವುಂ ಗೋಸಂ।
ಕುಲದೆ ಬಿಡಲ್ತನ್ನ ತಾಯನೆಯ್ದುವ ತೆರದಿಂ॥
ತಳೆದ ಭವಂಗಳ ಕರ್ಮದ।
ಫಳಮಿಂದೆಯ್ದುವುದು ಮುನ್ನಮೆಸಗಿದ ನರನಂ ||೧೦೧||

ಸ್ಥಿರಮಲ್ಲಂ ರೂಪುಂ ಮೆ।
ಯ್ಸಿರಿಯುಂ ಜವ್ವನಮುಮಪ್ಪ ಸಿರಿಯುಮನಾನಿಳೆಯೊಳ್॥
ದಿರಲೊಂದಾನುಂ ತಕ್ಕಂ।
ತಿರೆ ಸರಿ ಯಲ್ಲದೊಡೆ ಬರಿದೆ ಪೇಳ್ವಂತೆ ವಲಂ ||೧೦೨||

ಕ್ಷಿತಿಯೊಳಗೆಯ್ದೆ ಬಾಳ್ವೆಮೆನಲೊಲ್ಲದ ಮಾನವರಿಲ್ಲ ಮರ್ತ್ಯರಾ।
ಕೃತಿಯನದಾರೊಡರ್ಚಿದರೊ ಬೇಲದಪಗ್ಗ ಸಮಂತು ಕರ್ಪ್ಪನಂ॥
ತತಿ ಮುದದಿಂದದಾರ್ಕವಳೆವಗ್ಗೊ ಸದಿತ್ತರೊ ಪೂರ್ವಜನ್ಮದಾ।
ತ್ರಿತಮೆನೆ ಬರ್ಕ್ಕುಮಂತವರವರ್ಗ್ಗಳೆದಂತಿರೆ ಭೋಗಸಂಕುಳಂ ||೧೦೩||

ಮುನಿಗಳುವಾರ್ತರಿಲ್ಲ ಬರಿಸಲ್ ಮಳೆಯುಂ ಬರಗಾಲದೊಳ್ನರಂ।
ಕೊನೆ ಮೊನೆಯಿಲ್ಲದಂತೆ ಸುರಿಯಲ್ ಮಳೆಯುಂ ತಡೆಯಲ್ಕವಾರ್ತರಿ॥
ಲ್ಲಿನಿದೆನಿಸಿರ್ದ್ದ ಕರ್ಮಫಲಮಂ ಕಿಡಿಯಾಗಿಸಲಾರ್ತರಿಲ್ಲ ಪೇ।
ಣಿನಿದೆನಿಪಂತೆ ಕೈಪೆಯುನಣಂ ಸಮೆದಾರ್ತರುಮಿಲ್ಲಮುರ್ವ್ವಿಯೊಳ್ ||೧೦೪||

ತಾಳೆಯ ಮರನಂ ಪೋಲ್ತರ್।
ಪಾಳೆಯನಳದೊಮ್ಮೆ ತೆನೆಯುಮೋಲಿರೆ ಪೇಳ್ವಂ॥
ಏಳಿದರಾಗೆನಲಾರಂ।
ಗೋಳಿಡಿಸದೊ ಕರ್ಮದೆಸಕ ಮುರ್ವ್ವೀನಾಥ ||೧೦೫||

ಜವನೊಲ್ಲಂ ಗಡ ನೀರಸ।
ನವರಂ ಕೋವಿದರನೊಲ್ವನೆನೆ ತಿಳಿದವರಂ॥
ಜವದುಯ್ವಂ ತಿಳಿಯದರಂ।
ಭುವನದೆ ಚಿರಕಾಲಮಿರ್ಪ್ಪನಂ ಬಿಟ್ಟಪ್ಪಂ ||೧೦೬||

ನಳಿನಿಗಳನಂಚೆ ಕರ್ದುಕಲ್।
ಕುಳಿರ್ವೆಲರಿಂದಲೆಯಲಲೆಗಳವನೀಪತಿ ಯಾ॥
ಗಳುಮೆರೆದುಣ್ಬುದನೆಲ್ಲರ್।
ತಿಳಿಯಲ್ ಪ್ರಾಕ್ಕರ್ಮಫಲಮದಲ್ಲದೆ ಪೆರತೇಂ ||೧೦೭||

...ಲರಿಕ್ತಂ ಸೀಸಿರು ನಿ ।
ಬಲ್ಲಿಲಕಂಪಂ ಬೇರೆ ಸಿನ್ನ ಸೆಲಗೊಳ್ ನೃಪತೀ ।
ಕೆಲಬರ್ ಕರ್ಮವಿಪಾಕದ ।
ಫಲವುಂ ದುರ್ನಯುವನೆಸಪರೆನಿತೋಗಿರೆಂದುಂ ॥೧೦೮॥

ಜಲನಿಧಿ ವೇಷ್ಟಿತಾವನಿಯೊಳೊಲ್ದವರಾರಸಿತಾಸುಪೊಂದು ಕೊೞ ।
ಳ್ವಳುಮನ ಭೀಷ್ಟಮಂ ಬಯಸುವರ್ ತಮಗೊಳ್ಳಿತನೆಲ್ಲಮಂ ನರರ್ ॥
ಪಳಸದೆ ಬಷ್ಪ್ರಗಮಂ ಬಯಸೆ ಬಾರದುದಂ ತಡೆದನ್ನರಾರುಮೇ ।
ನೊಳಗೆಯಸೇಷಕರ್ಮಫಲಮಂ ಬಿಡದುಣ್ಬ ಮನುಷ್ಯವರ್ಗದೊಳ್ ॥೧೦೯॥

ಮೊದಲಿಂ ಕರ್ಮಫಲಂ ಪೆ ।
ರ್ಚ್ಚದು ಕುಂದದು ಮೇಣಾಕಾಲದೊಳ್ಬರದುದೆ ॥
ಬ್ಬಿದೊಡೂರುಂಗೋಲೆಸೆ ತಾಂ ।
ಗದು ನೆರೆನ್ದೊಡೆ ನೆರೆಗುಮುಳ್ಳುದೇಕೆಯುಬೆಡಂ ॥೧೧೦॥

---

## ೧೨. ಸತ್ಯಂ.

ತನಗೀಯಲ್ಕನಿತಾನುಮಿಲ್ಲದ ನರಂ ಕೇಳ್ವಾಗಳಿಲ್ಲೆಂದು ಪೇ ।
ಳ್ವನುಮಂ ಸ್ವೈಜಮೆನುತ್ತೆ ಪೇಳ್ವರೆದೆಗಗ್ಗಿಗೇ ಗರ್ ದಳಾಗಳ್ ವಲಂ ॥
ನಿನಗೀವೆಂ ಬಿಡೆನೆಂದು ಪೂಣ್ದು ನುಡಿದಂತುಂ ಮೋಸಮಂ ಗೆಯ್ವ ದು ।
ರ್ಜನನೀಸಾದಪಸೇಂ ಕೃತಘ್ನರೊಳಗಂ ಮಿಕ್ಕಂ ಧರಾ ಚಕ್ರದೊಳ್ ॥೧೧೧॥

ತಕ್ಕವರುಂ ತಗದವರುಂ ।
ಪಿಕ್ಕುವರೇಂ ತಮ್ಮ ಸಹಜಗುಣಮಂ ಸವಿಯಲ್ ॥
ಸಕ್ಕರೆ ಯಾರಾಗ್ಗಗಂ ಸೀ ।
ಪಕ್ಕಂ ಕಹಿಯುಕ್ಕುಮತ್ತೆ ಬೇವಮದರ್ಗೆಗಂ ॥೧೧೨॥

ತನಗೆಡ್ಡವಾದ ಕಾಲದೊ ।
ಳನಿಬರೊ ಬಾಂದಳದ ಮಿಾಂಗಳೆಂಬನ್ನಮೆಡರ್ ॥
ತನಗೊದವಲ್ ಕೆಲರಲ್ಲದೆ ।
ನೆನೆದಪರೇಂ ಮುಂತೊಡರ್ದ ಕೆಳೆಯುನೆನುತ್ತುಂ ॥೧೧೩॥

ಪುರುಷಾರ್ಥತ್ರಯದೊಳಗೊಂ ।
ದಿರೆ ನಡುವಣ್ತುಂ ನರಂಗೆರಳ್ಕಲದಿಂ ಮಿ ॥
ಕ್ಕಿರಡೆಯ್ದುಗುಮಾ ನಡುವ ।
ಣ್ತಿರದಾತಂಗೊಲೆಯೊಳಟ್ಟ ದುಗುಡನೆ ಬಕ್ಕರ್ಗಂ ॥೧೧೪॥

ಪಯಪೊಳ್ಳಿತ್ತಾಗೆ ವತ್ಸಂ ಬೆಲೆವಡಗುಮೆನಲ್ ವಿದ್ಯೆಯುಂ ಪೊರ್ದುರ್ದಂಗಾ ।
ರಯೆವಿತ್ತಂ ತೀವಿರಲ್ಕಾಸೊರೆವನುಡಿಯೆ ಸಲ್ವಂತೆವೋಲ್ಸಲ್ಗುಮೀಸು ।
ಸ್ವರ್ಗಯೊಳೆತ್ತಂ ರಿಕ್ತನೊಂದುಕ್ತಿಗಳುಳಿ ಕಿರಿದುಂ ತುಷ್ಟಿರಕ್ಷೇಗಿಲಂ ಭೂ ।
ಮಿಯನಂತಿಂತಾಷೆಯುಂ ಬಾಷ್ಯದೊಳೊಳವುಗದೇಬಾಳ್ವೊಯಾ ಸೇಗಿಲಂದಂ ॥೧೧೫॥

ಬಿಡುವುದೆ ಕೈವೆಯ ಸಟ್ಟೆ ।
ಲ್ಕಡವಿ ಸೊರೆಯುಸುಪ್ಪುಸೆಯ್ಯೊಸಪೂರ್ಲ್ಗ ಭೂಷೆ ॥
ನಿಡಿದು ನಿಜಾಗಮವಂ ಕ ।
ಟ್ರೊಡಮೇಂ ದುಸ್ತರಯುಮನುಳಿಪರೇನನಿಲರ್ ॥೧೧೬॥

ಬಳಿಸುವವರಂ ಬಾಂ ಮು ।
ಸ್ಕೇಳಿಸುವುದು ಬಷ್ಟ್ರ ದಾರ್ಗ ಮೊಡರ ನಂದೇಂ ॥
ಸಾನಿಯ ತೋಂಟದ ಕಂಪ್ರಗ ।
ಳೇಳದ್ ಸುದಗೊಸ್ಕೆ ತೀಪಿದಾ ಕದಳಿ ತಿಯಾ ॥೧೧೭॥

ಪಲತೆರನಾದೊಡಮರ್ಕರ ।
ಪಲತೆರನಲ್ಲವರಕಿಡುವ ಪಾಪಿಯಿಂ ಪಿಂ ॥
ಪಲತೆರನಾದೊಡ ಮನಸೀ ।
ತಳದೊಳಗರನೊಂದು ವ್ಯಾಪ್ತಿಯೊಂದಟ್ಟ ಫಲಂ ॥೧೧೮॥

ನಿಂದಾಸ್ತುತಿಗಳನೊಂದುಂ ।
ಪೊಂದದರಾರಾಯಮಾಯುಂ ಬಾಳದರೇ ॥
ಬಂದನುಭವಿಸದರಾರೆಡ ।
ರಂ ಬಿಸ್ಕುದರಾರ್ ಸಮಸ್ತ ಸಭಾದೊಳಿಂದಂ ॥೧೧೯॥

ಅತಿಪೋಪುದೆ ಕಾದೊಡಲುಂ ।
ಹಿತೆಗೆಯ್ದುದು ಮಿಕ್ಕ ಸೆಳೆದುಕೊಂಡುಯ್ವುದಿಂ ॥
ಕ್ಷಿತಿತಲದೊಳ್ ತಸ್ಕೆಸಗದ ।
ಕೃತಿಯೊಂದೇ ಸಲ್ಗಮೊಡನೆ ಪರಲೋಕದೊಳ್ ॥೧೨೦॥

## ೧೫. ಮನ್ಮಥರಾಯನ ಭೀತಿ.

ಮಗುಳದನುಸೆಲಂಬ ಸಂಸ್ಕೃತಿಮದಿರೆಯ ಮತ್ತರು [illegible] ।
ಪಿಗಳ ಪೆಣ್ಣಂಗಳಿಂ ಮೋಹಮತ್ತಿ [illegible] ॥
ತುಗಳ ಪೆಣ್ಣಂಗಳುಂ ವಿಷಗಸಂ [illegible] ।
ಪುಗೆ ಮಾನವಂ [illegible] ॥೧೨೧॥

ಕಾಡೊಳ್ ತುಂಬಿಗಳುಲಿಪಿಂ।
ಗಾಡುತಿರಲ್ ಪಿಡಿದು ಪಕ್ಕಿಗಳನಿರದಿರಿಸಲ್ ॥
ಗೂಡಿನೊಳವನಂ ಸೆರೆಗೆ।
ಯ್ದಾಡಿಪರೊಪ್ಪಿಂಗಮುಳ್ಳಿನೆಗಮೂಷರಮಂ ॥೧೨೨॥

ಬಗೆದಂ ನಳ್ಳಿಯು ಕಾಲಂ।
ಸಿಗಿದುಣಲಂದಿಂದುಕೊಳೆತ ಬೆರಲುಂ ಮೆಯ್ಯೊಳ್ ॥
ಒಗೆಯಲ್ ಪಾಂಡುರರೋಗಂ।
ದುಗುಡದೆ ತಿರಿತಪ್ಪನುಂಡು ಕರ್ಮ್ಮದ ಫಲಮಂ ॥೧೨೩॥

ನಯಮೆನಿಸಿದನೆಯ್ಯಂ ಬೆಂ।
ಕಿಯು ಸೋಂಕಿಂ ಸುಟ್ಟು ಮುಟ್ಟಿ ಸುಡುವಂತಿರೆವೋಲ್ ॥
ನಯವಿದರುಂ ದುಸ್ಸಂಗದಿ।
ಸ್ವಯಶಕ್ತೀಡಾಗಿ ಮಾಡಿದಪರನ್ನೆಯುಮಂ ॥೧೨೪॥

ಪರಿಕಿಪ್ಪೊಡೆ ಬಳೆಗುಂ ಸ।
ತ್ಪುರುಷರ ಕೆಳೆ ಬಾಳಚಂದ್ರನಂತನುದಿನಮುಂ ॥
ಕರಗುಗುಮನುದಿನಮುಂ ನೀ।
ಚರ ಕೆಳೆ ನಂದುತ್ತೆ ಪೂರ್ಣಮಾಸೀ ಶಶಿವೋಲ್ ॥೧೨೫॥

ಗುಣಿಗಳ್ತಾಮೆಂದು ಕೆಯ್ಕೊಂಡವರೊಳತಿಮುದಂಬೆತ್ತು ಸಾರ್ದರ್ ಗಡಂ ತ।
ದ್ಗುಣಮೊಂದಂ ಕಾಣಲಿಲ್ಲಾಯ್ತುಕಟ ಕಡೆವರಂ ಮುನ್ನಮಾರಯ್ಯದಿಂ ತಾ ॥
ಯ್ತ್ತುಣಮೆಂದರ್ ನೀನತಿಸ್ನೇಹದ ತಿರೆಯುಲಿಸಮರ್ಚ್ಚೆಯುಂ ಗಂಧಮುಂಟೆಂ ॥
ದೆಣಿಸಿರ್ದರ್ ಭುಸ್ಸೆನುತ್ತುಂ ನೆಗೆಪೆಲರುಣಿಯುಂ ಕಾಣಲಾಶ್ಚರ್ಯಮುತ್ತರ್ ॥

ಮನಮುಂ ಕೆಯ್ತ್ತುಮುಮೊಂದ।
ಲ್ತ್ತುನರಂಗಿಳೆಯುಲ್ಲಿ ಬೇರೆವೇರವು ನರನಾ ॥
ಮನದೊಳಗಣ ಕರಣಂಗಳ।
ನನಿತ್ತುಮಂ ನೋಡೆ ಬಲ್ಲನಾವನು ಪೊಳನೇ ॥೧೨೭॥

ಒಳಗೊಲವಿಲ್ಲದೆ ಕೆಯ್ತ್ತುವ।
ಪೊಳಕೊಂಡಿರೆ ತನ್ನ ಕಜ್ಜಮಪ್ಪನೆಗಂಕೆ ॥
ಯ್ಯೊಳೆ ಟಕ್ಕಂ ಮೆರೆದೊಡೆಯಾ।
ಕೆಳ ಮಾಸುಗುಮಳಿಗುಮತ್ತೆ ಮಲಯಾವನಿಪ ॥೧೨೮॥

ಸಿರಿಗಂ ಕರವಾಳೊರ್ವನ।
ಕರದಿಂದಪಿಕರವನಡರಲೆರ್ದ್ದಗಿಡುವಂತ ॥

ಲ್ಪರಸಂಗದಿನಳಿದಪ್ಪುದಿಹ ।
ಪರವೆರಡುಂ ತೊರೆವುದದರಿನರನರಿಯುದರಂ ॥೧೨೯॥

ಪಿಡಿದಿರ್ಪ್ಪಯ್ ಮನೆವಾಳ್ತೆಯುಂ ಮನಮೆ ನೀಂ ನಿನ್ನಾರ್ಜಿಸಿರ್ದ್ದೆಲ್ಲಮಂ ।
ಪಡೆಯಲ್ ಸಂತತಿ ವೇಳ್ಕುಮೆಂದು ಪಲಕಾಲಂ ಚಿಂತಿಪಯ್ ದೇಹದಿಂ ॥
ದೊಡವಾಳ್ವಯ್ ನಿಜಮೆಂದು ನೀನೆನಿತುಬಾಳ್ವಯ್ ವ್ಯರ್ಥಮಂತೆಲ್ಲಮುಂ ।
ಕಡೆಯೊಳ್ ನಿನ್ನೆಸಗಿರ್ದ್ದ ನಲ್ಮೆಯೆ ಸಹಾಯಂ ಸ್ವಲ್ಪಮಾಗಿರ್ದ್ದೊಡಂ ॥೧೩೦॥

# ೧೪. ವಿದ್ಯೆ.

ಸೊಬಗೇಂ ಮಿಳ್ಳಿಸೆ ಕರೆಗಳ್ ।
ಸೊಬಗೇನೊಡಲಿಂಗೆ ಪೂಸುವನುಲೇಪನಮುಂ ॥
ಸೊಬಗೇಂ ನರಂಗೆ ಕುರುಳುಂ ।
ಸೊಬಗಲ್ತವು ಕಲ್ತವಿದ್ಯೆಯೇ ಸೊಬಗಿಳೆಯೊಳ್ ॥೧೩೧॥

ಇಂದೀವುದು ಸತ್ಫಲಮಂ ।
ಕುಂದದೆ ಪೆರರ್ಗೀಯೆ ನೆಗಳ್ವುದೆಸಗದು ಕೇಡಂ ॥
ಮುಂದತೆಗೆ ವಿದ್ಯೆಯೇ ಮ ।
ರ್ದ್ದೊಂದಲ್ಲದೆ ಪೆರತನರಿಯೆನಾಂ ಮೂಜಗದೊಳ್ ॥೧೩೨॥

ಬಳೆದೊಡಮೂಷರದೊಳ್ ಲವ ।
ಣಲವಂ ಕಳಮೆಯೊಳೆ ಬಳೆವ ನೆಲ್ಲಿಂದಂ ಪೆ ॥
ರ್ಗ್ಗಳವೆಂಬಂತಿರಲರಿದರ್ ।
ಕುಲಹೀನಂ ಕಲ್ತನಾಗೆ ತಲೆಯೊಳಗಾಂಪರ್ ॥೧೩೩॥

ಪಡೆದಂ ಬಯ್ತೊಡೆಯಿಂದಮುಯ್ಯಲರಿದನ್ಯಂಗಿತ್ತೊಡೂರ್ವರ್ಗೆ ಬಂ ।
ಕಿಡದಿರ್ಕ್ಕುಂ ಕಿಸುಗಣ್ಚಿದಂದರಸರಿಂದಾಕರ್ಷಿಸಲ್ಬಾರದೆಂ ॥
ದೊಡೆ ಪಿತ್ರಾರ್ಜಿತಮಾಸ್ತಿಯೆಂದು ತಿಳಿದರ್ ಮಕ್ಕಳ್ಗೆ ಬಯ್ತಿಟ್ಟುಮುಂ ।
ಕುಡದಿರ್ಕ್ಕನ್ಯಧನಂಗಳಂ ಕುಡುಗೆ ಮುನ್ನಂ ವಿದ್ಯೆಯೊಂದಂ ಕರಂ ॥೧೩೪॥

ಕಲೆಗಳಪಾರಮಾರಯೆ ಪಲಂ ಕಿರಿದಾಯುಷಮೋದುವಂಗೆ ಬಂ ।
ದಲೆಯಿಪ ಜಾಡ್ಯಮುಂ ಪಲವು ದೂರಿಸಿ ನೀರನದೊಲ್ದು ಕೀರಮಂ ।
ನಲವಿನಿನಾಯ್ವ ಹಂಸಿಯವೊಲಾಯ್ದು ವಿಚಾರಿಸಿ ಧರ್ಮಮಾರ್ಗದೊಳ್ ।
ನಿಲಿಸುವ ವಿದ್ಯೆಯಂ ಪಿರಿದು ಕಲ್ತಪರಲ್ತೆ ವಿವೇಕವೃತ್ತಿಗಳ್ ॥೧೩೫॥

ಕಾಣದೊಡುತ್ತಮಕುಲಮಂ ।
ದೋಣಿಯನೆಳೆವಂಗೆ ಕೂಡಿ ಪೋಳೆಯುಂ ಸಾಯ್ವರ್ ॥

ಮಾಣದೆ ತಿಳಿದರ್ ತಾಮನೆ ।
ಕಾಣೊಲವಿಂ ಕುಲವಿಹೀನನೊಳಗಂ ಕಲೆಯಂ ॥೧೩೬॥

ಪಳೆಯ ಕಲೆಗಳಂ ಕಲ್ತರ್ ।
ಪೆಳಕಿಲ್ಲದೆ ನೆರೆದು ಮೆರೆಯೆ ತಮ್ಮರಿವಂ ಪೊಂ ॥
ಪುಳಿವೋಪೆಡೆಯದು ಪೇಳಿ ।
ಸ್ವರ್ಗದಮರಾವತಿಯದೇವ ಸಭೆಯಿಂದೆ ಮಿಗಿಲ್ ॥೧೩೭॥

ಅರಿದರಕೆಳೆ ಕಷ್ಟರ್ಗಂ ಬೇ ।
ಸ್ವರ್ಗಕೆಗಂ ಸವಿದಂತೆ ಕಳೆಯದಿದ್ದರ್ಗರಕೆಳೆ ಪಾಂ ॥
ಗರಿಯದೆ ಕಷ್ಟರ್ಗಂ ತುದಿವರ ।
ಮುರೆ ಸವಿದಂತಬ್ಧಿ ಸಳಿಯಿತೋರ್ವಿರ್ನಾಥ ॥೧೩೮॥

ಸರುಗಂಪಿಲ್ಲದ ನಿರ್ಗ್ಗರ್ಗಂ ।
ನೆರೆಪ್ರದು ತನಿಗಂಪು ಕೂಡೆ ಪಾದರಿಮಲರಿಂ ॥
ಗರಿದರಸಂಗದಿನೊಂದ ।
ಕ್ಕರಿನೊಗೆಗುಂ ತಳಿಯದರ್ಗ್ಗರ್ಮರಿಪ್ರಂ ಸಂಪ್ರಂ ॥೧೩೯॥

ಧರ್ಮ್ಮರ್ಕ್ಕೆ ತರ್ಕ್ಕೆ ಕಲೆಗಳ್
ನೊರ್ಮ್ಮೆರ್ಗಯಮೋದದೆ ನಿರಂತರಂ ಲೌಕಿಕಮುಂ ॥
ಕರ್ಮ್ಮಗತಿಯಿನೊದಿದೊಡೆ ಪ ।
ಲರ್ಮ್ಮರ್ಸರಂ ಕಡುಗುಮುಮವನಿನೇಬಾಳ್ತೊಡೊ ಪೇಳ್ ॥೧೪೦॥

## ೧೫. ಸದ್ವಂಶಂ.

ಒಡಲೊಳ ಮುಡೆಯೊಳ ಮಡಸಿರೆ ।
ಒಡತನಮುಳಯರ್ ಕುಲೀನರರನೊಕ್ಕಳೆಯಂ ॥
ಕಡು ಒಡಬಿಡಾಗಿ ತಾನಿ ।
ದೊರ್ಡೆ ಸಿಂಗಂ ಸಸಿವಿನಿಂದೆ ಮೆಲ್ಗುಮೆ ಪುಲ್ಲಂ ॥೧೪೧॥

ಕಡುಪುರಂ ಬಿನ್ನಣಮುಂ ಸ ।
ಲ್ಪಡೆಯುಮಿವೀ ಮೂರುಮುಳ್ತ್ತೆ ಸಹಜಗುಣಂ ನೋಳ್ ॥
ಕ್ವ್ರಾಡೆ ಸತ್ಕುಲಜಾತರ್ಗ್ಗನೆ ।
ಪಡೆಯಲರಿದು ಮಿಕ್ಕವರ್ಗ್ಗೆ ಸಿರಿಯೊಸಿತರೆಯುಂ ॥೧೪೨॥

ಪುಸುಮಪ್ಪರ್ಡೆಯಿಂದೇಕ್ಕುದು ।
ಮಿಸುಗೆಳೆ ಕ್ಕೇತಪ್ಪುರ್ಗಮುಂ ಕಸಮಯಿಂ ಬೆಸಗೊ ॥

ಳ್ದುದುದಿಂ ಪಲನಡೆಗಳು ಪೊ ।
ಲ್ದುದು ವೃತ್ತಮ ನಂಶಕೆತ್ತಲರಿಸಲ್ ನೆರೆದರ್ ॥೧೪೩॥

ಸತ್ಕೃತಿಯಿಂ ಪಳ ಬೊಡ್ಡರ ।
ಸತ್ಕೃತಿಯಿಂ ಬಿಕ್ಕರ್ಣಮಾಗ್ಗಣಮುಂ ಪ್ರಾಪ್ತ ॥
ಸತ್ಕುಲದೊಳ್ ಫಲಮೊಂತುಟೊ ।
ಸತ್ಕೃತಿ ದುಷ್ಕೃತಿಯಭೇದದೊಂದು ॥೧೪೪॥

ಅಂಟಿಕೆಯರಿಯುವೊಗುತ್ತಿರೆ ।
ನಂಟಿಕೆ ಕೀಳ್ಗಿಚ್ಚಿದಿಂದಮಂಟಿಕೆ ಪೊಲ್ಲಂ ॥
ದಂಟಿಕೆಯೊರೆದಗ್ಗಳಿಯದೊ ।
ಡಂ ಜಗದೊಳಗಿಂತು ಪೃಥ್ವೀವರ ಮರಸಸ್ಸ ॥೧೪೫॥

ಇನಿದಪ್ಪ ಸಲ್ಲೆಯುಂ ಸಂ ।
ಗಿನಿನುಡಿಯುಂ ಮುತ್ತಿನಿದಿರ್ಗೆಯುಂ ॥
ಜನಿಯಿಸಿದರೊಳಪ್ಪುರ್ವ ಪೊ ।
ನ್ನಿನ ಮುತ್ತಿನ ಪನಸದೊಡ್ಡ ಮುಕ್ತಿಯಾನಾ ॥೧೪೬॥

ಜಂತೆಗಳಿದಿರೆ ಗೆದ್ದ ।
ತಿಂತ್ರಿಣಿಗೊಂಡಿರೆಯು ಪೊರ್ಣದೆ ॥
ತುಂತುಸಿರ್ಗಳಿಡೆ ಮರೆಯು ।
ಪ್ಪಂತೊಳ್ಳಿದರೆಸಪರೊಳ್ ತಂ ಪೇದರೊಳಂ ॥೧೪೭॥

ಆರೆ ನುಂಗಿರೆಯುಂ ಪಾಪ ।
ಸ್ವರ್ಗರೆಯುಂ ಪೆರೆ ಬೆಳಗುವಂತೆ ಪೋಲ್ಪ ॥
ತರಣಿಮುಡಂಗದೆ ಪಿಪ್ಪನಿ ।
ಬಿರೊಳಿರೆಯುಂ ಗೆಯ್ಯೆತಕ್ಕುದಂ ಗೆಯ್ದಪ್ಪರ್ ॥೧೪೮॥

ಪೂಡಿಸಿ ಪುಲ್ಲೆಯುಸಾಹವ ।
ಕೋಡಿಸೆ ಹಯದಂತೆ ಕಾದಲಾಪ್ಪುದೆ ಕಷ್ಟಂ ॥
ಕಾಡಿಸೆಯುಂ ಸತ್ಕುಲಜರ್ ।
ಮಾಡುವವೋಲ್ ಪೆರವರಾಪ್ಪರೇಂ ಸುಖದೊಳಗಂ ॥೧೪೯॥

ಇನಿತಾನುಂ ತಮಗಿಲ್ಲದಂತೊದವೆ ದಾರಿದ್ರ್ಯಂ ಬಿಡರ್ ತಮ್ಮ ಸ ।
ಜ್ಜನ ತಕ್ಕೊರ್ಪ್ಪೆಯನುತ್ತಮರ್ ನೆರೆಗೆ ನಿಲ್ವರ್ ಬೇಳ್ಪವರ್ಗ್ಗೆಂದು ನೊ ॥
ಳ್ಪನಸುಂ ಬತ್ತಿರೆಯುಂ ನದಂ ಕುಳಿಯನೊಂದಂ ಮಾಡಲಂದಲ್ಲಿತ ।
ಣ್ಣನೆ ನೀರ್ಕಂಡದ ನೀಂಟೆಯುಲ್ತ ಪಥಿಕರ್ ನೀರಳ್ಕೆಯುಂ ಪಂಗಿಪರ್ ॥೧೫೦॥

## ೧೬. ಉತ್ತಮರ್.

ನೆರೆದುರ್ವೀ ತಳಮೆಲ್ಲಮಂ ಧವಳಿಸಲ್ ಬೆಳ್ದಿಂಗಳಂ ಬೀರುವಾ ।
ಪೆರೆಯುಂ ಪೋಲ್ತಪರಲ್ತೆಯುತ್ತಮರೆನಲ್ಕಾಚಂದ್ರಮಂ ಸೈರಿಪಂ ॥
ಕರೆಯುಂ ತಮ್ಮೊಳಗುತ್ತಮರ್ ಕರೆಯನೆಂತುಂ ಸೈರಿಸರ್ ಕಂಡು ಬೆ ।
ಳ್ಕರುವರ್ ಕುಂದುವರಾಗಳೆಯ್ದಿದಪಮಾನಕ್ಕಿಂತೆ ಭೇದಂ ವಲಂ ॥೧೫೧॥

ಬಗೆತೀರ್ಗೆ ತೀರದಿರ್ಕೆಮ ।
ಬಗೆಯುಂ ಬಿಡದಿರ್ಪರುತ್ತಮರ್ ಸರಿಯೊಡಲಂ ॥
ಬಗಿವಂಬಿಂಗುರಿತಪ್ಪೆಯು ।
ಮಗೆಯುತ್ತಿಸಿ ಸಿಂಗದತ್ತಲಿಸುವಂಬೆ ಮಿಗಿಲ್ ॥೧೫೨॥

ತಗದಂ ಗೆಯ್ವೊಡೆ ತಾರರ್ ।
ಬಗೆಯುಂ ನರಮೆರ್ದ್ದು ತೋರೆಯುಂ ಬರನಂತ ॥
ಲ್ಲೊಗೆದಿರಲುತ್ತಮರೆರ್ದೆಯುಂ ।
ಬಿಗಿದರಿನಾರಿಂದೆ ತಕ್ಕುದನೆ ಮಾಡಿದಪರ್ ॥೧೫೩॥

ದೊರೆಕೊಳೆ ದೈವಾಯತ್ತದೆ ।
ಚರಿತದೆ ಪೆರನೋರ್ವನೆಸಪರವನೊಳ್ ಕೆಳೆಯುಂ ॥
ಕರಮುತ್ತಮರಡಿಯಿಡುತಿರೆ ।
ಯುರೆಯುರೆಯುಂ ನುಣ್ಪುವಡೆದು ಬಳಿ ತೋರುವವೋಲ್ ॥೧೫೪॥

ಬರೆಪಂ ತಿಳಿಯದನುಂ ಬ ।
ಲ್ಲರ ಗೋಷ್ಠಿಯನೆಯ್ದಿ ಬಾಯ್ಗೆ ಬಂದಂತೊರೆಯು ॥
ತ್ತಿರಲೊಡ ಮುತ್ತಮರವನಂ ।
ಪರಾಭವಿಸಲೊಲ್ಲದಡಗಿ ಕೆಮ್ಮನೆಯಿರ್ಪರ್ ॥೧೫೫॥

ಎನಿತುಂ ಹಿಂಸಿಸೆಯುಂ ಕ ।
ಬ್ಬಿನ ಕೋಲಂ ಮುರಿದು ನುರಿದು ಕಣ್ಣೀರ್ಸುರಿವಂ ॥
ತಿನಿದಪ್ಪುದಲ್ತೆ ಉತ್ತಮ ।
ರೆನಿತಳಲಿಸೆಯುಂ ಕನಲ್ದು ಬಯ್ಗುಳನಾಡರ್ ॥೧೫೬॥

ಕಳರೆಂದುಂ ಪರವಸ್ತುವಂ ಕುಡಿಯರೆಂದುಂ ಮದ್ಯಮಂ ಗೆಯ್ಯರಾ ।
ಗಳುವೊಂದಂ ತಗದಂ ನಿಮಿರ್ದು ಪೆರರಂ ತಾಮೇಳಿಸುತ್ತಾಡರಾ ।
ಗಳು ವೊಂದಂ ಪುಸಿಯಂ ವಿನೋದಕೆನುತುಂಪೇಳರ್ ಮಹಾಕಷ್ಟಸಂ ।
ಕುಳ ಮಿನ್ನೆಯ್ದಿಯುಮುಬ್ಬೆಗಂದಳೆಯರೆಂತುಂ ಜ್ಞಾನಿಗಳ್ ಚಿತ್ತದೊಳ್ ॥೧೫೭॥

ಪೆರವರ ಹಾಸ್ಯಕೆ ಕಿವುಡಂ ।
ಪೆರವೆಂಡಿರ ನೋಟದಲ್ಲಿ ಕುರುಡಂ ದೂರಲ್ ॥
ಪೆರರಂ ಮೂಕನುಮಾಗಿರ ।
ಲರನಂ ಬೋಧಿಸಲವಂಗೆ ಪೆರತರಸುಂಟೇ ॥೧೫೮॥

ಕುಲಹೀನರ ಬೞಿಗೆಯ್ದಲ್ ।
ಪಲರ್ಮ್ಮ ಯಾಚಿಸುವನೆಂದು ಸಿಡಿಮಿಡಿಗೊಳ್ವರ್ ॥
ಕುಲವಂತರ ಬಳಿಗೆಯ್ದಲ್ ।
ನಲವಿಂ ಪಲಸೂಳುಮೆಸಪರೊಳ್ಳಿತನೆನಸುಂ ॥೧೫೯॥

ಎನಸುಮಿವರ್ ಧನಮುಳ್ಳವ ।
ರೆನುತುಂ ಗುಣಹೀನರಲ್ಲಿ ಬಾಳ್ವೊಳಿಗದಾ ॥
ಮನುಜರದೇಂ ಬಗೆವರೆ ಪೇೞ್ ।
ಕನಕದ ಪೊಸಕಣಿಗಳೆಂದು ಗುಣಿಗಳ್ ನಿಳೆಯೊಳ್ ॥೧೬೦

## ೧೬. ಪಿರಿಯರಂ ಪಳಿಯದಿಪ್ಪುದು.

ಸ್ವೈರಿಪರೆನುತುಂ ಪೊಲ್ಲದ ।
ನಾರೆಸಪರ್ ದೋಷಮಿಲ್ಲದವರೊಳ್ ಮುನಿಯು ॥
ಲ್ಯಾರುಂ ಸಾಲರ್ ತಿಳಿಯಿಸ ।
ಲಾರುಂ ಕಡಲಿಂದೆ ಸುತ್ತಿದೀನೆಲದೊಡೆಯಾ ॥೧೬೧॥

ಪೊನ್ನನೆ ಕುಡೆಯುಂ ಪಡೆಯು ।
ಲ್ಯುನ್ನತಮತಿಗಳನಸಾಧ್ಯಮವರೊಳ್ ಪೊಣರ್ದುಂ ॥
ಸನ್ನಿಧಿಯೊಳಿರ್ದುಮರಿಯುದ ।
ರಿನ್ನುಂ ಫಲವೊಂದದಕಟ ಪೊಳ್ತುಂ ಕಳೆವರ್ ॥೧೬೨॥

ಪಳೆಯುಕಲೆಗಳಂ ಕಲ್ತರ್ ।
ಪಳಿಯಲ್ ಪಳಿಯದು ಪೊಗಳ್ತೆ ಪೊಗಳಲವರ್ ಮೇ ॥
ಲುಳಿದರ್ ಪೊಗಳ್ದೊಡಮೇಂ ಮೇಣ್ ।
ಪಳಿದೊಡಮೇಂ ಗಣಿಪರಲ್ಲರರಿತವರೆತ್ತಂ ॥೧೬೩॥

ಪೆಡೆವಣಿಬೊಜಗಂ ಗೆಂಟಸೊ ।
ಳಡಂಗೆಯುಂ ಸಿಡಿಲ ದನಿಗೆ ಬೆಳ್ಕುರುವವೊಲೇಂ ॥

ನಡುಗುವರೊ ಕಲ್ಲ ಕೋಂಟೆಯೊ ।
ೞಡಂಗಿದರಿಗಳ್ ಕನಲ್ದೊಡಾರ್ಪ್ಪುಳ್ಳದಟರ್ ॥೧೬೪॥

ಎಮ್ಮಂ ನೀಮರಿತವರ ।
ಲ್ಲೆಮ್ಮನ್ನರ್ ಜಗದೊಳಿಲ್ಲವೆನುತುಂ ಪೊಗಳಲ್ ॥
ತಮ್ಮಂತಾಮೆತ್ತಣ್ತದು ।
ಕೆಮ್ಮನೆ ಜಾಣರ್ ಪೊಗಳ್ದೊಡದು ತುತಿಯಕ್ಕುಂ ॥೧೬೫॥

ಮುಂಬಗಲಿನ ನೆೞಲಂತೞಿ ।
ಗುಂ ಪಿಡುಕೀಳ್ವಕ್ಕಳೊಂದು ಕೆಳೆ ಸಂಜೆನೆೞಲ್ ॥
ಎಂಬಿನಮನಾದಿಯಿಂ ಜಸ ।
ಮುಂ ಬೀರುವ ಜಾಣರೊಂದು ನಲ್ಗೆಳೆಬಳೆಗುಂ ॥೧೬೬॥

ತಿರೆಯಾಣ್ಮರ ಸಿರಿಯುಂ ಪೆಂ ।
ಡಿರ ಚೆಲ್ವುಂ ಪೊರ್ದ್ದಿದರ್ಗ್ಗೆ ಸೊಗಮುಂ ಕುಡುಗುಂ ॥
ಪಿರಿದುಂ ನೆೞಲಂ ಕುಡುಗುಂ ।
ಮರಂಗಳಾರೆಯ್ದೆಯುಂ ಕವಲ್ಗೊಂಬುಗಳಿಂ ॥೧೬೭॥

ಕೆಳೆಯಿಂ ವಿಯೋಗಮಪ್ಪುದು ।
ಕೆಳೆಯುರಗಲ್ಕೆ ಗಡ ಬರಿಸದಾರ್ಗ್ಗದವೞಲಂ ॥
ಕೆಳೆಯೊಳಗಂ ಮಿತಿವಿಾರದೆ ।
ಕೆಳೆಗೊಳ್ವುದು ಮನುಜರಲ್ಲಿ ಮಾನವತಿಲಕ ॥೧೬೮॥

ಏನುಂ ಕಲಿಯದ ದಿನಮುಂ ।
ಭೂನುತರೊಳ್ಕೂಡಿ ಸಲ್ಲದಿರ್ದ್ದ ದಿನಮುಂ ॥
ಏನುಂ ಕುಡದಾದಿನಮುಂ ।
ತಾನಿರ್ದ್ದುಂ ವ್ಯರ್ಥವೆಂಬರರನಂ ಬಲ್ಲರ್ ॥೧೬೯॥

ತಕ್ಕುದು ಪೆರ್ಮೆಗೆ ವಿನಯಂ ।
ತಕ್ಕುದು ವಿದ್ಯೆಗೆ ಜಿತೇಂದ್ರಿಯತ್ವಂ ಬೞಿಕಂ ॥
ತಕ್ಕುದು ಜಗದೊಳಗಾರಯೆ ।
ಮೊಕ್ಕಳದೈಸಿರಿಗೆ ದೀನರಕ್ಷಣೆ ಪಿರಿದುಂ ॥೧೭೦॥

# ೧೮. ಸತ್ಸಂಗಂ.

ಇನದರ್ಶನದಿಂ ಮಂಜಿನ |
ಪನಿ ಪುಲ್ಲಂ ಬಿಟ್ಟು ತೊಲಗುವಂತಿರೆ ಮುಂ ದು ||
ರ್ಜನ ಸಂಗದಿನರಿಯದೆ ಬಂ |
ದನಯುಂ ಸತ್ಸಂಗದಿಂದೆ ತೊಲಗುಗುಮಲ್ತೇ ೧೭೧||

ಅರಿಯರನಂ ಮೋಸಕ್ಕೆ |
ಳ್ಚರು ಸಾವಿಂಗಂಜು ಸೈಸು ನುಡಿದೊಡೆ ಪೆರವರ್ ||
ಬಿರುನುಡಿಯುಂ ಕೇಡಿಗಳೊಳ್ |
ತೊರೆ ಕೆಳೆಯುಂ ಪೊತ್ತಿರುತ್ತಮರ ಸೂಕ್ತಿಗಳಂ ||೧೭೨||

ಧರೆಯೊಳ್ ಸ್ವಜನವಿಯೋಗಂ |
ಪರಿಹರಿಸಲ್ಬಾರದಿರ್ಪ್ಪನೋವುಂ ಸಾವುಂ ||
ಧರಿಯಿಸಲೊಡಲಂ ತಪ್ಪದು |
ನರಂಗೆ ನಿಜಮೆಂದು ತಿಳಿದು ಪರಿಯರೊಳ್ಕೂಡಿರು ನೀಂ ||೧೭೩||

ಇನಿದಲ್ಲದೊಡಂ ಪುಟ್ಟುವು |
ದಿನಿದೊಂದಂ ಮಾಳ್ಪಧರ್ಮಮರಿವರ ಬಳಿಸಾ ||
ರ್ದನಿಶಂ ಪಾಳಿಸಲರನಂ |
ಮನುಜಂಗಿನಿದಕ್ಕುಮಲ್ತೆ ಪುಟ್ಟುಂ ಧರೆಯೊಳ್ ||೧೭೪||

ಊರೊಳಗಣ ಒಚ್ಚಲ ನೀರ್ |
ಸೇರಲ್ ತೊರೆಯುಂ ಸೆಗಳ್ದ ತೀರ್ಥವೆನಿಕ್ಕುಂ ||
ಸೇರಿದೊಡುತ್ತಮರನಘಮು |
ರಾರಾಯುಂ ಕುಂದದಚಲದಂತುರೆ ನಿಲ್ವರ್ ||೧೭೫||

ಪಿರಿದಶ್ರೇಯಾಂಸರ್ ಭೂ |
ಧರನನ್ನರ ಕೆಳೆಯಿನೊಂದುವರ್ ಶ್ರೇಯುಮನಂ ||
ಒರದಿಂ ತಣ್ಗದಿರಂ ಬಿ |
ತ್ತರಿಪಿಂದುವನೊಂದಲಲ್ತೆ ಮೊಲಕಂ ಜನಮುಂ ||೧೭೬||

ಅರಯೆ ಪಾಲೊಳ್ ಬೆರಸಿದ |
ನೀರುಂ ನಿಜಗುಣವನುಳಿದು ಪಾಲೆನಿಸುವವೋಲ್ ||
ಸೇರಲ್ ಸಚ್ಚರಿತರನಾ |
ರಾರುಂ ದುಶ್ಚರಿತರವರ ದುಸ್ಸರ್ಗಮುಳಿಗುಂ ||೧೭೭||

ಗರ್ದ್ದೆಯು ಪೆರ್ಗುಂಟೆಯು ಬಳಿ ।
ಪೊರ್ದ್ದಿದ ಪುಲ್ಗೇನಪಾಯಮಾದಪುದೆ ಉಳಿಲ್ ॥
ಬರ್ದಿನವರ್ ತಾಂಗುವಿನಂ ।
ಪೊರ್ದ್ದಿದರಂ ಪಗೆವರೊಂದು ಕಿನಿಸೇವುದೊ ಪೇಳ್ ॥೧೭೮॥

ನೆಲ್ಲಂ ಕಳಮೆಯೆ ಪೇಳ್ಗಂ ।
ಬಲ್ಲರ ಗುಣದುನ್ನತಿಕ್ಕೆಯುಂ ಕುಲಮೊರೆಗುಂ ॥
ನಲ್ಲರಸುಂ ದುಸ್ಸಂಗದಿ ।
ನಿಲ್ಲನಿಕುಂ ನಾವೆ ಚಂಡವಾತದೆ ಮುರಿಗುಂ ॥೧೭೯॥

ಮನದೊಳ್ ಕೋಡಿಲ್ಲದೊಡಂ ।
ಜನರ್ಗ್ಗೆ ಪಳಿ ಪೊರ್ದ್ದುಗುಂ ವಲಂ ಸಂಗದೆ ಕಾ ॥
ಡಿನೊಳಳುರ್ದಿರೆ ದಳ್ಳುರಿ ಮ ।
ತ್ತಿನ ಮರನಂ ಸುಟ್ಟು ಚಂದನವನುಳಿದಪುದೇಂ ॥೧೮೦॥

## ೧೯. ಪದ್ಧತಿ. (ಧರ್ಮದ ಮಹತ್ವಂ)

ಚಾಗಮುಗಲ್ದುದು ದೂರಂ ।
ಸಾಗಿತು ಪೊಸಜವ್ವನಂ ಕರಂ ಕಾದಲೆಯರ್ ॥
ನೀಗಿದರಳ್ಕರನಾವಿಂ ।
ಪೋಗುವುದರನೆಂದು ತೊಲಗುವುದೆ ತಕ್ಕುದು ದಲ್ ॥೧೮೧॥

ಅನುಬಂಧಂಗಳುಮಮರ್ದಿರೆ ।
ಯನುಭವಿಸಿದೆವಿಲ್ಲಿ ಕೊರತೆಯಿಲ್ಲವೆನುತ್ತುಂ ॥
ನೆನೆವೆಗ್ಗರಿರ್ಕ್ಕೆಯಾಬಂ ।
ಧನವನಿತುಂ ನಿಲಲಾರವೆಂದು ತಿಳಿದವರೆಳಸರ್ ॥೧೮೨॥

ಒಡಲಿರ್ದ್ದಂತಿರೆ ಬೇರೆಬೇರೆ ಪರಿಜಂ ನಿಷ್ಕಾರಣಂ ತಾಳ್ಗುಮಿ ।
ನ್ನೆಡರುಂ ನೋವುಮನೇಕವಿರ್ಪ್ಪವೆನುತುಂ ನಿಶ್ಶಂಕೆಯಿಂ ಧರ್ಮಮಂ ॥
ಬಿಡದಿಂ ಬರ್ಪ್ಪಭವಕ್ಕೆ ಬಿಳ್ತ್ತವೆನುತೊಂದಾನಂದದಿಂ ನೀತಿಯೊಳ್ ।
ನಡೆಯಿಂ ಪುಲ್ಗೆ ಸಮಾನವೆಂದೆಣಿಸುತಾಪತ್ಕೋಟಿಯುಂ ಬಾಳ್ದಿರಿಂ ॥೧೮೩॥

ಬರಗಾಲದೊಳಂ ಕೆರೆ ನೀ ।
ರೆರೆದೂರಂ ತಣಿಪುವಂತೆ ಬಡತನದೊಳಂ ॥
ನೆರೆದುತ್ತಮರೀವಂತಿರೆ ।
ಪೆರರೇನಿತ್ತಪರೆ ಪಿರಿದುಮೈಸಿರಿ ಯಿರೆಯುಂ ॥೧೮೪॥

ನೆಲಕೆಲ್ಲಂ ನಲವೆರ್ಚ್ಚೆ ಪಾಯ್ದು ತಣಿಪಿತ್ತಂದಿಂದು ಬತ್ತಿರ್ದ್ದೊಡಂ ।
ಕೆಲವುಂ ತಾಣದೊಳೀವುದಲ್ತೆ ತೊರೆ ನೀರಂ ತೋಡಲೆಂತಂತು ಸ ॥
ತ್ಕುಲರಿರ್ದ್ದಂದು ಪಲರ್ಗ್ಗ ಬೇಳ್ಪನಿತುಮಂ ಮುಂ ಕೊಟ್ಟುಮಿನ್ನಿತ್ತಪರ್ ।
ಕೆಲಬರ್ಗ್ಗಂತುಮದೆಂತು ಪಾಡಳಿದೊಡಂ ತಕ್ಕೊರ್ಮ್ಮೆ ಸಾಮಾನ್ಯಮೇ ॥೧೮೫॥

ಬೆಳ್ಳಿತ್ತಿನಂ ಬರ್ರಿಯುವೋ ।
ಲೊಳ್ಗಿದರೊಳ್ ದೋಷಮಿನಿತುಮಿರ್ದ್ದೊಡೆ ಪೇರ್ಕ್ಕುಂ ॥
ಬೆಳ್ಳಿತ್ತಂ ಕೊಂದೊಡಮೇ ।
ನೆಳ್ಳನಿತುಂ ಕಾಣಲಾರದಲ್ಪರ ದೋಷಂ ॥೧೮೬॥

ಎನಿತೆನಿತರಸರಿಯದ ಕಿಱಿ ।
ಯನ ಕೆಳೆಯನಿನಿತುಮಲ್ತೆ ಬಳೆವುದು ದುಗುಡಂ ॥
ಕನಸಿನೊಳಂ ಪೊಲ್ಲಮೆಯುಂ ।
ನೆನೆಯದರೊಳ್ ವೈರಮುಂ ವಲಂ ಫಲಮಾಗುಂ ॥೧೮೭॥

ಮೆರೆ ನೀಂ ಕೋಮಳೆಯರ್ಕ್ಕಳೊಳ್ ಪರಿದು ಮೆಲ್ಪಂ ಶತ್ರುಸಂದೋಹದೊಳ್ ।
ತೊರೆದಾನಲ್ಕೆಯನಳ್ಕುವಂತೆ ಜವನುಂ ತೋರುಳ್ಳಸಿಂ ಕೆಂತ್ತ್ರವ ॥
ಕ್ಕುರೆ ಮಿಕ್ಕಂತಿರೆ ತೋರುಶೌರ್ಯಮನೆತ್ತಂ ಸಜ್ಜನವ್ರಾತದೊಳ್ ।
ಮೆರೆದಿರ್ ನಲ್ಮೆಯನಿಂತುಟೆಂದು ತಿಳಿ ನಿಸ್ಸೀಸೀಮೆಯಂ ಭೂಮಿಪಾ ॥೧೮೮॥

ಕಡುಮಚ್ಚರದಿಂ ಪಿಸುಣರ್ ।
ನುಡಿದೊಡೆ ಮಾನಸಮುಂ ಕಲಂಕದಿರ್ಪ್ಪರಿಪ್ರುಳ್ಳರ್ ॥
ಬಿಡುವರೆ ಪೇಳ್ ದೀಪದೊಳೊ ।
ಳ್ಗೊಡರಂತಿರೆ ಚಿತ್ತದೊಳಗಣ ಸ್ಥೈರ್ಯಮನೇಂ ॥೧೮೯॥

ತುತ್ತಿಸುವರರ್ಥಿಗಂ ಮುಂ ।
ದುತ್ತಂ ತಾಮುಣ್ಬರುತ್ತಮರ್ ಬಳಿಕಂ ಪಿಂ ॥
ದುತ್ತ ಕೊನೆಯೊಳ್ ಮೂರುಂ ।
ಕುತ್ತವನೋಡಿಸಿ ಭವಾಬ್ಧಿಯುಂ ದಾಂಟಿದಪರ್ ॥೧೯೦॥
(ಕಾಮ, ಕ್ರೋಧ, ಮೋಹವೆಂಬ ಮೂರು ಕುತ್ತಂಗಳ್)

## ೨೦ ಅಣ್ಮು.

ಎರೆದೊಡೆ ಬೆಂಚೆಯಿಂದೆ ಪೊಲನೇಂ ಬೆಳೆಯುಪ್ಪುದೆ ನಂಟರಲ್ಲಿ ಬೊ।
ಬ್ಬಿಱಿಯುತೆ ಕುಕ್ಷಿಯಂ ಪೊರೆವ ಸೋಮಾರಿ ಬಳ್ದೊಡೆ ಬಾಳೆ ಬಾಳ್ಗಳಂ ॥
ಮೆರೆದು ವಿಳಾಸದಿಂ ಕುಣಿವ ಕನ್ನೆಯ ನೋಟದ ಚಾಕಚಕ್ಯಮಂ।
ಜರೆದುಪಕಾರಮಂ ನೆಗಳ್ವ ಸಾಸಿಗಳಣ್ಮಿದೊಡಾರಿದಿರ್ಚುವರ್ ॥೧೯೧॥

ಪೆರರಂಟಲ್ ಬಳಿಯುತ್ತಡಂಗಿ ಕುನಿಯುತ್ತಿರ್ದಾರ್ಕವಲ್ಗೊಂಬು ಕ।
ಯ್ಮರೆವನ್ನಂ ಬೆಳೆದಾಗಳಾಸೆಯನೆ ಕಟ್ಟಲ್ಸಾಲ್ವವೋಲ್ ಜಿಷ್ಣಿಸೆ ॥
ಳ್ದಱಿನಾದಂ ತನಗೆಂದು ತಾನೆ ಮನುಜಂ ಕಯ್ಗಣ್ಮುವಂತಣ್ಮಲ।
ಳ್ಕಱಿನಕ್ಕಂ ಕೃತಕೃತ್ಯನಾದೊರೆಯ ಬಾಳೊಂದಲ್ತೆ ಬಾಳುರ್ವಿಯೊಳ್ ॥೧೯೨॥

ಅರಿದಂ ಕೀಳ್ಕಜ್ಜಕೆ ಬೇ।
ಸಱಿಸದೆ ಕೊಳೆ ಪಡೆಗುಮಲ್ಲಿಮೇಲ್ಗಜ್ಜವನಿ ॥
ನ್ನಱದೊರ್ಮ್ಯೆ ತಕ್ಕುದಿಲ್ಲದೆ।
ಕಿಱಿದೆರೆಯಂ ಪಿಡಿದು ತಣಿಗುವಾಪೆರ್ಬುಲಿಯುಂ ॥೧೯೩॥

ತೀರುವ ಬಗೆಯುಂ ತೀರಿಸ।
ಲಾರುಂ ಸಾಲ್ದಪ್ಪರಲ್ತೆ ಪೆಂಡಿರುಮದಱಿಂ ॥
ತೀರದದಱೊಳ್ ಸೆಡೆದಪ್ಪದೆ।
ತೀರಿಸುವಿನಮಣ್ಮೆ ಗಂಡತನಮೆಂದೆನಿಕುಂ ॥೧೯೪॥

ಪಲಪಲವು ಕಾಲದಿಂ ಸ।
ತ್ಕುಲದುಷ್ಕುಲಮಾದುವೆಂದಕುಲಮುಂ ಕುಲಮೇ।
ನೆಲದೊಳ್ ವಿರಕ್ತಿಯಿಂ ಸ।
ತ್ಕಲೆಯಿಂ ಸಾಹಸದಿನಾದಕುಲಮೊಂದೆ ಕುಲಂ ॥೧೯೫॥

ಆಳಿಯುತ್ತಿರೆ ಗೆದ್ದಲಿನದ।
ವಳಲಿಂದಾಲದ ಮರಕ್ಕೆ ತಾಂಗುವ ಪಲವುಂ ॥
ಬಿಳಲೆಂಬಂತರಿಯುಮೆಯುಂ।
ಕೆಳವಂ ಮರೆವಂತೆ ತಾಂಗೆವೇಳ್ಕುಂ ಪುತ್ರಂ ॥೧೯೬॥

ಪೆರರಾ ಹಾವದಿನಂಗಚೇಷ್ಟೆಗಳಿನಾಭಾವಂಗಳಿಂತಕ್ಕುಮೆಂ।
ದಱಿವರ್ ಬೆಂಬಳಿಗೊಂಡು ಸಾಸಿಗರನೆತ್ತಂ ಸಲ್ವವರ್ ಲೋಕದೊಳ್ ॥
ನೆರೆದಿರ್ಪರ್ ವಲಮೆಂದು ಬಲ್ಲವರಭೀಷ್ಟಾವಾಪ್ತಿಯಪ್ಪನ್ನಮೆ।
ಳ್ದಱಿನಿಂದಣ್ಮನಡಂಗಿಸುತ್ತೆ ಬಗೆಯಂ ತಾಂ ತೀರ್ಚುವರ್ ಸಾಸಿಗರ್ ॥೧೯೭॥

ಕರಿಕುಂಭಸ್ಥಳವಿದಳನ ।
ಖರನಖರಕ್ಕೊಪ್ಪೆ ತನ್ನ ತೀಕ್ಷ್ಣಪದಂ ಕೇ ।
ಸರಿಯುಂ ಪೋಲ್ತರ್ ಪಾಡಳಿ ।
ದಿರೆ ಸಾವೆಳ್ತರೆಯುಮನ್ನೆಯುವನೇಕೆಸಪರ್ ॥೧೯೮॥

ಇನಿದಪ್ಪ ಕರ್ಬಿನಾ ತಿರು ।
ಳೆನೆ ಕಮ್ಮೆಸಳುಳ್ಳರಲ್ಗೆ ಕಂಪಿಲ್ಲದವೋ ॥
ಅನಿತುಂ ಪೆಸರ್ವಡೆದ ಕುಲ ।
ಕ್ಕನುಸರಿಪಣ್ಮಿಲ್ಲದಿರ್ದೊಡೇಂಬಾಳ್ತೆಂಗೊಪೇೞ್ ॥೧೯೯॥

ಸಿರಿವಳ್ಳರ್ ತಿರೆಯಾಣ್ಮರೆಂದು ಪೆರರೊೞ್ ಶಾಕಾನ್ನಮುಂ ತಿಂದು ನೀ ।
ಚರದೇಂ ಬಾಳ್ವರೊ ಮೃಷ್ಟಭೋಜನದ ಸೊಲ್ಲಂ ಕೇಳದಣ್ಮುಳ್ಳವರ್ ॥
ಪಿರಿದುಂ ಕಷ್ಟದಿನಾರ್ಜಿಸಿದ್ದರ್ನಿಜಕರೊೞಂ ಕಂಡು ಕಂಡಾದರಂ ।
ಬೆರಸಾಗಂಬಿಯು ನೀರುಮಂ ಸೊದೆಯೆನುತ್ತುಂ ಭಾವಿಸುತ್ತೀಂಟುವರ್ ॥೨೦೦॥

## ೨೧. ಬಂಧುಪ್ರೇಕ್ಷಣೆ.

ನಂದನ ನುತ್ಸಂಗದೊಳಿರೆ ।
ಬಂದಂದಿನ ಸೇದೆಯೆಲ್ಲಮುಂ ತಾಯ್ಮರೆವೊಂ ॥
ಱಂದದೆ ತನ್ನವರಂ ಕಂ ।
ಡಂದಳಿಗುಂ ತನ್ನ ಪೊರ್ದಿರ್ದಳಲೆನಿತನಿತುಂ ॥೨೦೧॥

ಅಳಲಿಸುವ ಬಿಸಿಲಬೇಗೆಗೆ ।
ನೆಳಲೀಗುಂ ಪೊರ್ದಿರ್ದಗ್ಗರ್ ಪೆರ್ಮ್ಮರನೆಂತಂ ॥
ತುಳಿದಾತ್ಮಸಂಕಟವನಱ ।
ವಳಲಂ ಪೆರರಲ್ಲಿ ಕಂಡು ಮುಳ್ಗಿಪರರಿದರ್ ॥೨೦೨॥

ಪಿರಿಯರ್ ಪೊರ್ದಿರ್ದ ತಮ್ಮನ ।
ರಿರೆಯುವರಂ ತಾಂಗಲೊಲ್ಲೆವೆನರಡಕಿಲ್ಗೊಂ ॥
ಡಿರೆ ಪಲಪಲವುಂ ಕಾಯ್ಕ್ಕಾ ।
ಯ್ತಿರೆ ಪೊತ್ತಿರಲಾರದಿಪ್ಪರ್ ಕೊಂಬಿಲ್ಲಿಳೆಯೊಳ್ ॥೨೦೩॥

ಕಿರಿಯರ ಕೆಳೆಯೆಂತುಂ ನಿಲ ।
ಲರಿಗುಮೆ ಧರೆಯೆಲ್ಲಮರಿವಿನಂ ಕೂಡಿರೆಯುಂ ॥

ಪೆರರಂ ತಾಂಗುವ ಪಿರಿಯರೊ ।
ಳುರೆ ತ್ರೊಡದರ್ಾನಂಟು ನಿಂತು ಸಫಲಮೆನಿಕ್ಕುಂ ॥೨೦೪॥

ಇವರಿನ್ನರಿವರ್ ನಮ್ಮವ ।
ರಿವರ್ ಪೆರಪರೆಂದು ಪೇಳದೆಲ್ಲರುಮಂತ ॥
ಮ್ಮವರಂತೆಯೆ ಭಾವಿಸಿ ತೀ ।
ರ್ಚ್ಪುರ್ವರುತ್ತಮರಾರ ಕಷ್ಟಮುಮನಾದರದಿಂ ॥೨೦೫॥

ಒಲವಿಲ್ಲದೆ ನಲ್ಲುಣಿಸಂ ।
ಪುಲಿಯುಗುರಂ ತೀವುವಂತೆ ಪೊಂಬಟ್ಟಲೊಳೆ ॥
ಕ್ಕಲದಿನಿದೆ ಇನಿದು ನಂಟರ್ ।
ನಲಪಿಂದುಪ್ಪಿಲ್ಲದೋಡೊಳೆಕ್ಕಿದಕೂಳುಂ ॥೨೦೬॥

ನೆರೆದೂಳ್ಪುಣಿಸಂ ತಾಂ ಪೊ ।
ತ್ತರೆಯೊಳಿಡಲ್ ನಂಟರಲ್ಲದರ್ ಬೇನಂತ ॥
ಳ್ಕರಿನಿಡೆ ನಂಟರ್ ಪಿನ್ನೇ ।
ಸರಿಸೊಳ್ ಬೀಳುಣಿಸುಮಿನಿದೆನಿಕ್ಕುಂ ಜಗದೊಳ್ ॥ ॥೨೦೭॥

ಮುಟ್ಟಿಗೆಯಂತಿರೆ ಮುನಿಯದೆ ।
ಕುಟ್ಟುತ್ತುಂ ತಿಂದು ಕೊರಡೆನಲ್ ಕೊನೆಯೊಳ್ ಕೆ ॥
ಯ್ವಿಟ್ಟರ್ ನಂಟರೆನಿಪ್ಪರ್ ।
ಸುಟ್ಟುಂಗೋಲಂತೆ ಪುಗುವರಲ್ಲರೆ ಉರಿಯುಂ ॥೨೦೮॥

ಒದವಿದ ಸುಖದೊಳ್ ಸುಖಮು ।
ತ್ತೊದವಲ್ ದುಗುಡಕ್ಕೆ ದುಗುಡಮುತ್ತದಿರಲ್ಕೇ ॥
ವುದೊ ನಂಟರ ನಂಟದು ಕ ।
ರ್ಮದ ಮುಂದನ ಜನ್ಮದೊಳಗಮಿಂ ಮಾಳ್ಪುದದೇಂ ॥೨೦೯॥

ತನ್ನವರಲ್ಲದ ಪಗೆವರೊ ।
ಳುನ್ನತ ಮಧುಪರ್ಕಮಾದೊಡಂ ಬೇವಕ್ಕುಂ ॥
ತನ್ನಂ ಪೊರೆಲ್ವರ ಮನೆಯೊಳ ।
ಗನ್ನದ ಗಂಜಿಯುಮೊಡಲ್ಗೆ ತಾನಮರ್ದೆನಿಕುಂ ॥೨೧೦॥

## ೨೨ ನಂಟನಾರಯ್ವುದು

ವಿನುತಕುಲಜಾತನೆಂದೋ ।
ರ್ವನ ಕೆಳೆ ಬೇಱಾಗದೆಂದು ಕೆಳೆಗೊಳ್ವುದು ಮೇಣ್ ॥
ಮನಮಂ ತಿಳಿದಿರ್ದ್ದಪನೆಂ ।
ದೆನುತುಂ ಕೆಳೆಗೊಳ್ವುದಾವನಾದುಮುರ್ವರೆಯೊಳ್ ॥೨೧೧॥

ಅಱಿದಱಿದೊರ್ವ್ವಯಾನೆ ಕಿಡೆವೃತ್ತಮೆ ಕೊಲ್ವುದು ಜೋಡನಂ ದಲ ।
ಳ್ಳಿಱಿದೆಸೆದಂಬು ನೋಯಿಸಲದೊರ್ಕ್ಕದೆಯೊರ್ಕ್ಕದೆ ಬಾಲವಾಡೆ ತ ॥
ನ್ನೆಱೆಯನನೆಯ್ದುಗುಂ ಶುನಕನೆಂದೊಡೆ ನೇಹವನಾನೆಯನ್ನರೊಳ್ ।
ತೋಱೆವುದು ನೇಹಮಂ ಶುನಕನನ್ನರೊಳಟ್ಟಿಯಿನಪ್ಪುಕೆಯ್ವುದೈ ॥೨೧೨॥

ಪಲವುಂ ಕಾಲದೆ ಪಕ್ಕದಿರ್ದ್ದೊಡಮುಂ ಸೌಹಾರ್ದ್ರವೊಂದಿಲ್ಲದರ್ ।
ಕೆಲವಾನುಂ ದಿನವೊಪ್ಪ ಸಲ್ಲರೆಸಿತಾನುಂ ದೂರದಲ್ಲಿರ್ದ್ದೊಡಂ ॥
ಪಲವುಂ ಕಾಲವೆಱಲ್ವ ಕೂರ್ಮೆಯು ಬೆಡಂಗಂ ತೋರ್ಪ್ಪ ತಕ್ಕೊರ್ಮೆಯುಂ ।
ಸಲೆ ಕೆಯ್ಬಿಟ್ಟಿರಲಾರ್ಗಮಕ್ಕುಮೆ ತೊಡರ್ದ್ದೊರ್ಪ್ಪರ್ದ್ದ ಸನ್ಮೈತ್ರಿಯುಂ ॥೨೧೩॥

ಕೋಡಿನಲರ್ ಮಲರ್ದ್ದ ಬೞಿ ।
ಕ್ಕಾಡುವುದೇಂ ಮುಗಿಯುದಂತೆ ನಂಟರೆವೇೞ್ಕುಂ ॥
ತೋಡಿದಕೊಳನೊಳ್ ಮುಂಮಲ ।
ರ್ದೊಡೆ ದಿನಂ ಮುಗಿವಪೂವಿನನ್ನರ ನಂಟೇಂ ॥೨೧೪॥

ಬಿನ್ನಣಮೆ ನಂಟನೊಳ್ ಕಾಂ ।
ಗನ್ನರ್ ಕಡೆಯಣವರಲ್ತೆ ನಡುವಣವರ್ ತೆಂ ।
ಗನ್ನರ್ ಕಡೆವರೆಗಂ ತಾಂ ।
ಮುನ್ನಿಟ್ಟದಱಿಂ ತಾಳೆಯನ್ನರುತ್ತಮರೆಂದುಂ ॥೧೧೫॥

ಕಲೆಗಚ್ಚರ್ನೊಳಂ ಸಮೆದೊಡ ।
ಮೊಲವಿಂದಂ ಸೊಪ್ಪನಿಕ್ಕೆಯುಮರ್ದದು ಕೆಳೆಯರ್ ॥
ಒಲವಿಲ್ಲದಿಕ್ಕೆ ಮಗಮಗಿ ।
ಸಲದೆಂತುಂ ತೊವ್ವೆಕಾಂಚಿಜೇರಿಗೆಯಕ್ಕುಂ ॥೨೧೬॥

ಶುನಕನ ಕಿಱುವೆರಲಂತಿರೆ ।
ಸನಿಹದೊಳಂ ನೊಳನಕಾಲನಿತ್ತೊದಗದಸಂ ॥
